Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**

ವಿಶೇಷ ಸಂಚಿಕೆ

| | |
|---|---|
| भाग—IX | अनुभाग I |
| PART IX | SECTION I |
| ಭಾಗ IX | ವಿಭಾಗ I |

**प्राधिकार से प्रकाशित**

Published by Authority

ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ।

| | | | |
|---|---|---|---|
| **सं—1** | **नई दिल्ली, गुरुवार, एप्रिल 29, 1993** | **वैशाख 9, 1915 (शक)** | **खन्ड—15** |
| **No. 1** | New Delhi, Thursday, April 29, 1993 | Vaishaka 9, 1915 (Saka) | **Vol. 15** |
| ಸಂಖ್ಯೆ ೧ | ನವದೆಹಲಿ, ಗುರುವಾರ, ಏಪ್ರಿಲ್ ೨೯, ೧೯೯೩ | ವೈಶಾಖ ೯, ೧೯೧೫ (ಶಕ) | ಸಂಪುಟ ೧೫ |

## Ministry of Law, Justice & Company Affairs

(Legislative Department)

New Delhi, March 22, 1993.

ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ

(ವಿಧಾಯೀ ಇಲಾಖೆ)

ನವದೆಹಲಿ, ಮಾರ್ಚ್ 22, 1993.

The translation in Kannada of the following Acts, namely—(1) The Consumer (Protection) Act, 1986 (2) The Negotiable Instruments Act, 1881 and (3) The Urban Land (Ceiling and Regulation) Act, 1976 are hereby published under the authority of the President and shall be deemed to be Authoritative Texts thereof in Kannada under Clause (a) of Section 2 of the Authoritative Texts (Central Laws) Act, 1973 (50 of 1973)

ಈ ಕೆಳಕಂಡ ಅಧಿನಿಯಮಗಳು, ಎಂದರೆ—(1) ಬಳಕೆದಾರ (ಸಂರಕ್ಷಣಾ) ಅಧಿನಿಯಮ, 1986 (2) ಪರ್ಕಾಮಣೀಯ ಲಿಖಿತಗಳ ಅಧಿನಿಯಮ, 1881 ಮತ್ತು (3) ನಗರ ಭೂಮಿ (ಪರಮಾವಧಿ ಮತ್ತು ವಿನಿಯಮನ) ಅಧಿನಿಯಮ, 1976 —ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ 2ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಬಳಕೆದಾರ (ಸಂರಕ್ಷಣಾ) ಅಧಿನಿಯಮ, 1986

**[1986ರ ಸಂಖ್ಯೆ 68]**

[ಡಿಸೆಂಬರ್ 24, 1986]

ಬಳಕೆದಾರರ ಹಿತಾಸಕ್ತಿಗಳಿಗೆ ಉತ್ತಮ ಸಂರಕ್ಷಣೆಯನ್ನು ಒದಗಿಸಲು ಮತ್ತು ಆ ಉದ್ದೇಶಕ್ಕಾಗಿ ಬಳಕೆದಾರರ ವಿವಾದಗಳನ್ನು ಇತ್ಯರ್ಥಪಡಿಸುವುದಕ್ಕಾಗಿ ಬಳಕೆದಾರ ಪರಿಷತ್ತುಗಳ ಮತ್ತು ಇತರ ಪ್ರಾಧಿಕಾರಗಳ ಸ್ಥಾಪನೆಗಾಗಿ ಅವಕಾಶ ಕಲ್ಪಿಸಲು ಮತ್ತು ಅದಕ್ಕೆ ಸಂಬಂಧಿಸಿದ ಇತರ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಮೂವತ್ತೇಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು.

## ಅಧ್ಯಾಯ – I

## ಪ್ರಾರಂಭಿಕ

1. **ಚಿಕ್ಕ ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ಅನ್ವಯ .–** (1) ಈ ಅಧಿನಿಯಮವನ್ನು ಬಳಕೆದಾರ (ಸಂರಕ್ಷಣಾ) ಅಧಿನಿಯಮ, 1986 ಎಂದು ಕರೆಯತಕ್ಕದ್ದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು ಮತ್ತು ಬೇರೆ ಬೇರೆ ರಾಜ್ಯಗಳಿಗಾಗಿ ಮತ್ತು ಈ ಅಧಿನಿಯಮದ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

(4) ಅಧಿಸೂಚನೆಯ ಮೂಲಕ ಕೇಂದ್ರ ಸರ್ಕಾರವು ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿದ ಹೊರತು, ಈ ಅಧಿನಿಯಮವು ಎಲ್ಲ ಸರಕುಗಳಯ ಮತ್ತು ಸೇವೆಗಳಿಗೆ ಅನ್ವಯವಾಗತಕ್ಕದ್ದು.

2. **ಪರಿಭಾಷೆಗಳು.–** (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಸಮುಚಿತ ಪ್ರಯೋಗಾಲಯ" ಎಂದರೆ, ಕೇಂದ್ರ ಸರ್ಕಾರವು ಮನ್ನಣೆ ಮಾಡಿದ ಪ್ರಯೋಗಾಲಯ ಅಥವಾ ಸಂಸ್ಥೆ ಮತ್ತು ಸರಕುಗಳು ಯಾವುದೇ ದೋಷವನ್ನು ಹೊಂದಿರುವುವೇ ಹೇಗೆ ಎಂಬುದನ್ನು ನಿರ್ಧರಿಸುವ ದೃಷ್ಟಿಯಿಂದ ಯಾವುದೇ ಅಂಥ ಸರಕುಗಳ ವಿಶ್ಲೇಷಣೆ ಅಥವಾ ಪರೀಕ್ಷೆಯನ್ನು ನಡೆಸುವುದಕ್ಕಾಗಿ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ನಿರ್ವಹಿಸುತ್ತಿರುವ, ಹಣಕಾಸು ಒದಗಿಸುತ್ತಿರುವ ಅಥವಾ ನೆರವನ್ನು ಕೊಟ್ಟಿರುವಂಥ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿಸಲಾದಂಥ ಯಾವುದೇ ಪ್ರಯೋಗಾಲಯ ಅಥವಾ ಸಂಸ್ಥೆಯನ್ನು ಅದು ಒಳಗೊಳ್ಳುತ್ತದೆ;

(ಬಿ) "ಫಿರ್ಯಾದಿ" ಎಂದರೆ,–

(i) ಒಬ್ಬ ಬಳಕೆದಾರ; ಅಥವಾ

(ii) ಕಂಪನಿಗಳ ಅಧಿನಿಯಮ, 1956ರ (1956ರ 1) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ನೋಂದಾಯಿತವಾದ ಯಾವುದೇ ಸ್ವಯಂ ಸೇವಾ ಬಳಕೆದಾರ ಸಂಘ; ಅಥವಾ

(iii) ಫಿರ್ಯಾದನ್ನು ಮಾಡುವ ಅಥವಾ ಮಾಡುವಂಥ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ;

(ಸಿ) ' ಫಿರ್ಯಾದು' ಎಂದರೆ,–

(i) ಯಾವನೇ ವ್ಯಾಪಾರಿಯು ಅನುಸರಿಸಿದ ಯಾವುದೇ ಅನುಚಿತ ವ್ಯಾಪಾರ ಪದ್ಧತಿಯ ಪರಿಣಾಮವಾಗಿ ಫಿರ್ಯಾದಿಯು ನಷ್ಟ ಅಥವಾ ಹಾನಿಯನ್ನು ಅನುಭವಿಸಿದ್ದಾನೆಂದು;

(ii) ಫಿರ್ಯಾದಿಯಲ್ಲಿ ನಮೂದಿಸಿರುವ ಸರಕುಗಳು ಒಂದು ಅಥವಾ ಅದಕ್ಕೂ ಹೆಚ್ಚು ಕೋಷಗಳನ್ನು ಹೊಂದಿವೆ ಎಂದು;

(iii) ಫಿರ್ಯಾದಿನಲ್ಲಿ ನಮೂದಿಸಿರುವ ಸೇವೆಗಳು ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಕೊರತೆಯನ್ನು ಹೊಂದಿವೆಯೆಂದು;

(iv) ಫಿರ್ಯಾದಿನಲ್ಲಿ ನಮೂದಿಸಿದ ಸರಕುಗಳಿಗಾಗಿ ವ್ಯಾಪಾರಿಯು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ  ಮೂಲಕ ಅಥವಾ ಮೇರೆಗೆ ನಿಗದಿಪಡಿಸಿದ ಅಥವಾ ಸರಕುಗಳ ಮೇಲೆ ಅಥವಾ ಅಂಥ ಸರಕುಗಳನ್ನು ಒಳಗೊಂಡಿರುವ ಯಾವುದೇ ಪ್ಯಾಕೇಜಿನ ಮೇಲೆ ಪ್ರದರ್ಶಿಸಲಾದ ಬೆಲೆಗಿಂತ ಹೆಚ್ಚಿನ ಬೆಲೆಯನ್ನು ಹೊರಿಸಿದ್ದಾನೆಂದು

– ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಒದಗಿಸಿದ ಯಾವುದೇ ಪರಿಹಾರವನ್ನು ಪಡೆದುಕೊಳ್ಳುವ ದೃಷ್ಟಿಯಿಂದ ಫಿರ್ಯಾದಿಯು ಬರಹದಲ್ಲಿ ಮಾಡಿದ ಯಾವುದೇ ಆಪಾದನೆ;

(ಡಿ) “ಬಳಕೆದಾರ” ಎಂದರೆ.–

(i) ಸಂದಾಯ ಮಾಡಿದ ಅಥವಾ ವಾಗ್ದಾನ ಮಾಡಿದ ಅಥವಾ ಭಾಗಶಃ ಸಂದಾಯ ಮಾಡಿದ ಅಥವಾ ಭಾಗಶಃ ವಾಗ್ದಾನ ಮಾಡಿದಂಥ ಪ್ರತಿಫಲಕ್ಕಾಗಿ ಅಥವಾ ಮುಂದಕ್ಕೆ ಹಾಕಿದ ಸಂದಾಯದ ಯಾವುದೇ ವ್ಯವಸ್ಥೆಯ ಮೇರೆಗೆ ಯಾವುದೇ ಸಕಕುಗಳನ್ನು ಕೊಳ್ಳುವ ಯಾವನೇ ವ್ಯಕ್ತಿ, ಮತ್ತು ಸಂದಾಯ ಮಾಡಿದ ಅಥವಾ ವಾಗ್ದಾನ ಮಾಡಿದ ಅಥವಾ ಭಾಗಶಃ ಸಂದಾಯ ಮಾಡಿದ ಅಥವಾ ಭಾಗಶಃ ವಾಗ್ದಾನ ಮಾಡಿದ ಅಥವಾ ಭಾಗಶಃ ವಾಗ್ದಾನ ಮಾಡಿದ ಪ್ರತಿಫಲಕ್ಕಾಗಿ ಅಥವಾ ಮುಂದಕ್ಕೆ ಹಾಕಿದ ಸಂದಾಯದ ಯಾವುದೇ ವ್ಯವಸ್ಥೆಯ ಮೇರೆಗೆ ಅಂಥ ಸರಕುಗಳನ್ನು ಕೊಳ್ಳುವ ವ್ಯಕ್ತಿಯನ್ನು ಹೊರತುಪಡಿಸಿ, ಅಂಥ ಸರಕುಗಳನ್ನು ಉಪಯೋಗಿಸುವ ಯಾವನಾದರೂ ಅಂಥ ವ್ಯಕ್ತಿಯ ಅನುಮೋದನೆಯೊಂದಿಗೆ ಅಂಥ ಉಪಯೋಗವನ್ನು ಮಾಡಿದಾಗ ಒಳಗೊಳ್ಳುತ್ತಾನೆ. ಆದರೆ ಅಂಥ ಸರಕುಗಳನ್ನು ಮರುಮಾರಾಟಕ್ಕಾಗಿ ಅಥವಾ ಯಾವುವೇ ವಾಣಿಜ್ಯ ಉದ್ದೇಶಗಳಿಗಾಗಿ ಪಡೆದುಕೊಳ್ಳುವ ವ್ಯಕ್ತಿಯು ಒಳಗೊಳ್ಳುವುದಿಲ್ಲ; ಅಥವಾ

(ii) ಸಂದಾಯ ಮಾಡಿದ ಅಥವಾ ವಾಗ್ದಾನ ಮಾಡಿದ ಅಥವಾ ಭಾಗಶಃ ಸಂದಾಯ ಮಾಡಿದ ಅಥವಾ ಭಾಗಶಃ ವಾಗ್ದಾನ ಮಾಡಿದಂಥ ಪ್ರತಿಫಲಕ್ಕಾಗಿ ಅಥವಾ

ಮುಂದಕ್ಕೆ ಹಾಕಿದ ಸಂದಾಯದ ಯಾವುದೇ ವ್ಯವಸ್ಥೆಯ ಮೇರೆಗೆ ಯಾವುದೇ ಸೇವೆಗಳನ್ನು ಬಾಡಿಗೆಗೆ ಪಡೆಯುವ ಯಾವನೇ ವ್ಯಕ್ತಿ ಮತ್ತು ಸಂದಾಯ ಮಾಡಿದ ಅಥವಾ ವಾಗ್ದಾನ ಮಾಡಿದ ಅಥವಾ ಭಾಗಶಃ ಸಂದಾಯ ಮಾಡಿದ ಮತ್ತು ಭಾಗಶಃ ವಾಗ್ದಾನ ಮಾಡಿದ ಪ್ರತಿಫಲಕ್ಕಾಗಿ ಅಥವಾ ಮುಂದಕ್ಕೆ ಹಾಕಿದ ಸಂದಾಯದ ಯಾವುದೇ ವ್ಯವಸ್ಥೆಯ ಮೇರೆಗೆ ಸೇವೆಗಳ ಬಾಡಿಗೆಗೆ ಪಡೆಯುವ ವ್ಯಕ್ತಿಯನ್ನು ಹೊರತುಪಡಿಸಿ, ಅಂಥ ಸೇವೆಗಳ ಯಾವನೇ ಫಲಾನುಭವಿಯು ಅಂಥ ಸೇವೆಗಳನ್ನು ಮೊದಲು ಹೇಳಿದ ವ್ಯಕ್ತಿಯ ಅನುಮೋದನೆಯೊಂದಿಗೆ ಉಪಯೋಗಿಸಿಕೊಂಡಿರುವಾಗ ಒಳಗೊಳ್ಳುತ್ತಾನೆ.

(ಇ) "ಬಳಕೆದಾರ ವಿವಾದ" ಎಂದರೆ, ಯಾರ ವಿರುದ್ಧ ಫಿರ್ಯಾದನ್ನು ಮಾಡಲಾಗಿದೆಯೋ ಆ ವ್ಯಕ್ತಿಯು ಫಿರ್ಯಾದಿನಲ್ಲಿ ಒಳಗೊಂಡಿರುವ ಆಪಾದನೆಗಳನ್ನು ಅಲ್ಲಗಳೆಯುವಲ್ಲಿ ಅಥವಾ ವಿವಾದಿಸುವಲ್ಲಿ ಏಳುವ ವಿವಾದ;

(ಎಫ್) "ದೋಷ" ಎಂದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಇಟ್ಟುಕೊಂಡು ಬರಬೇಕಾಗಿ ಅಗತ್ಯಪಡಿಸಿದಂಥ ಅಥವಾ ವ್ಯಾಪಾರಿಯು ಯಾವುವೇ ಸರಕುಗಳಿಗೆ ಸಂಬಂಧಪಟ್ಟಂತೆ ಯಾವುದೇ ರೀತಿಯಲ್ಲಿ ಕ್ಲೇಮು ಮಾಡುವಂತೆ ಗುಣ, ಪರಿಮಾಣ, ಶಕ್ತಿ, ಶುದ್ಧತೆ ಅಥವಾ ಗುಣಮಟ್ಟದಲ್ಲಿನ ಯಾವುದೇ ಲೋಪ, ಅಪರಿಪೂರ್ಣತೆ, ನ್ಯೂನತೆ;

(ಜಿ) "ಕೊರತೆ' ಎಂದರೆ, ಯಾವುದೇ ಸೇವೆಗೆ ಸಂಬಂಧಪಟ್ಟಂತೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಇಟ್ಟುಕೊಂಡು ಬರಬೇಕೆಂದು ಅಗತ್ಯಪಡಿಸಿದ ಅಥವಾ ಕರಾರಿನ ಅನುಸರಣೆಯಲ್ಲಿ ಅಥವಾ ಅನ್ಯಥಾ ವ್ಯಕ್ತಿಯು ನೆರವೇರಿಸಲು ಮಾತು ಕೊಡಲಾಗಿರುವಂಥ ನೆರವೇರಿಕೆಯಲ್ಲಿನ ಗುಣ, ಸ್ವರೂಪ ಮತ್ತು ರೀತಿಯಲ್ಲಿನ ಯಾವುವೇ ಲೋಪ, ಅಪರಿಪೂರ್ಣತೆ, ನ್ಯೂನತೆ ಅಥವಾ ಅಪರ್ಯಾಪ್ತತೆ;

(ಎಚ್) 'ಜಿಲ್ಲಾ ನ್ಯಾಯಾಧಿಕರಣ' ಎಂದರೆ, 9ನೇ ಪ್ರಕರಣದ (ಕ) ಖಂಡದ ಮೇರೆಗೆ ಸ್ಥಾಪಿಸಲಾದ ಬಳಕೆದಾರ ವಿವಾದಗಳ ಪರಿಹಾರ ನ್ಯಾಯಾಧಿಕರಣ;

(ಐ) "ಸರಕುಗಳು" ಎಂದರೆ, ಸರಕುಗಳ ಮಾರಾಟ ಅಧಿನಿಯಮ, 1930 (1930ರ 3)ದಲ್ಲಿ ಪರಿಭಾಷಿಸಲಾದಂತೆ ಸರಕುಗಳು;

(ಜೆ) "ತಯಾರಕ" ಎಂದರೆ,–

(i) ಯಾವುವೇ ಸರಕುಗಳು ಅಥವಾ ಅವುಗಳ ಭಾಗಗಳನ್ನು ಮಾಡುವ ಅಥವಾ ತಯಾರಿಸುವ; ಅಥವಾ

(ii) ಯಾವುವೇ ಸರಕುಗಳನ್ನು ಮಾಡದೇ ಇರುವ ಅಥವಾ ತಯಾರಿಸದೇ ಇರುವ ಆದರೆ ಇತರರು ಮಾಡಿದ ಅಥವಾ ತಯಾರಿಸಿದ ಭಾಗಗಳನ್ನು ಜೋಡಿಸುವ ಮತ್ತು ಕೊನೆಯ ಉತ್ಪಾದನೆಯನ್ನು ತಾನೇ ತಯಾರಿಸಿದ ಸರಕುಗಳೆಂದು ಕ್ಲೇಮು ಮಾಡುವ; ಅಥವಾ

(iii) ಯಾವನೇ ಇತರ ತಯಾರಕನು ಮಾಡಿದ ಅಥವಾ ತಯಾರಿಸಿದ ಯಾವುವೇ ಸರಕುಗಳ ಮೇಲೆ ತನ್ನದೇ ಆದ ಗುರುತನ್ನು ಹಾಕುವ ಅಥವಾ ಹಾಕುವಂತೆ ಮಾಡುವ ಮತ್ತು ಅಂಥ ಸರಕುಗಳನ್ನು ತಾನೇ ಮಾಡಿದ ಅಥವಾ ತಯಾರಿಸಿದ ಸರಕುಗಳೆಂದು ಕ್ಲೇಮು ಮಾಡುವ ವ್ಯಕ್ತಿ.

**ವಿವರಣೆ:** ತಯಾರಕನು ಯಾವುವೇ ಸರಕುಗಳನ್ನು ಅಥವಾ ಅವುಗಳ ಭಾಗವನ್ನು ಅವನೇ ಇಟ್ಟುಕೊಂಡು ಬಂದಿರುವ ಯಾವುದೇ ಶಾಖಾ ಕಚೇರಿಗೆ ರವಾನಿಸುವಲ್ಲಿ, ಅಂಥ ಶಾಖಾ ಕಚೇರಿಯನ್ನು, ಅಂಥ ಶಾಖಾ ಕಚೇರಿಯಲ್ಲಿ ಹಾಗೆ ಅದಕ್ಕೆ ರವಾನಿಸಿದ ಭಾಗಗಳನ್ನು ಜೋಡಿಸಿದ್ದಾಗ್ಯೂ ಮತ್ತು ಅಂಥ ಶಾಖಾ ಕಚೇರಿಯಿಂದ ಅವುಗಳನ್ನು ಮಾರಾಟ ಅಥವಾ ವಿತರಣೆ ಮಾಡಿದ್ದಾಗ್ಯೂ ತಯಾರಕನೆಂಬುದಾಗಿ ಭಾವಿಸತಕ್ಕದ್ದಲ್ಲ;

(ಇ) ರಾಷ್ಟ್ರೀಯ ಆಯೋಗ ಎಂದರೆ, 9ನೇ ಪ್ರಕರಣದ (ಗ) ಖಂಡದ ಮೇರೆಗೆ ಸ್ಥಾಪಿಸಲಾದ ರಾಷ್ಟ್ರೀಯ ಬಳಕೆದಾರರ ವಿವಾದಗಳ ಪರಿಹಾರ ಆಯೋಗ;

(ಎಫ್) " ಅಧಿಸೂಚನೆ" ಎಂದರೆ, ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(ಜಿ) "ವ್ಯಕ್ತಿ" ಎಂಬುದು ,–

(ಎಚ್) ನೋಂದಾಯಿತವಾಗಿರುವ ಅಥವ ಆಗದಿರುವ ಒಂದು ಫಾರ್ಮು;

(ಐ) ಒಂದು ಹಿಂದೂ ಅವಿಭಕ್ತ ಕುಟುಂಬ;

(ಜೆ) ಒಂದು ಸಹಕಾರ ಸಂಘ;

(ಕೆ) ಸಂಘಗಳ ನೋಂದಣಿ ಅಧಿನಿಯಮ, 1860 (1860ರ 21)ರ ಮೇರೆಗೆ ನೋಂದಾಯಿತವಾಗಿರುವ ಅಥವಾ ಆಗದಿರುವ ವ್ಯಕ್ತಿಗಳ ಪ್ರತಿಯೊಂದು ಇತರ ಸಂಘ;

(ಎಲ್) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರ ಅಥವಾ ಸಂದರ್ಭಾನುಸಾರ ಕೇಂದ್ರ ಸರ್ಕಾರವು ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;.

(ಎಂ) "ಸೇವೆ" ಎಂದರೆ, ಸಂಭಾವ್ಯ ಉಪಯೋಗದಾರರಿಗೆ ಲಭ್ಯಗೊಳಿಸಬಹುದಾದಂಥ ಯಾವುದೇ ವಿವರಣೆಯ ಸೇವೆ ಮತ್ತು ಅದು ಬ್ಯಾಂಕಿಂಗ್" ಹಣಕಾಸು ಒದಗಿಸುವುದು, ವಿಮೆ, ಸಾರಿಗೆ, ಸಂಸ್ಕರಣಾ ವಿದ್ಯುತ್ ಅಥವಾ ಇತರ ಶಕ್ತಿಯ ಸರಬರಾಜು, ಊಟ ಅಥವಾ ವಸತಿ ಅಥವಾ ಅವೆರಡೂ, ಮನೋರಂಗನೆ, ವಿನೋದ ಅಥವಾ ಸುದ್ಧಿ ಅಥವಾ ಇತರ ಮಾಹಿತಿಯನ್ನು ಒದಗಿಸುವುದಕ್ಕೆ ಸಂಬಂಧಿಸಿದಂತೆ ಸೌಲಭ್ಯಗಳ ಒದಗಿಸುವಿಕೆಯನ್ನು ಒಳಗೊಳ್ಳುತ್ತದೆ. ಆದರೆ ಮುಫತ್ತಾಗಿ ಅಥವಾ ವೈಯಕ್ತಿಕ ಸೇವೆಯ ಕರಾರಿನ ಮೇರೆಗೆ ಯಾವುದೇ ಸೇವೆ ಸಲ್ಲಿಸುವುದನ್ನು ಒಳಗೊಳ್ಳುವುದಿಲ್ಲ;

(ಎನ್) "ರಾಜ್ಯ ಆಯೋಗ" ಎಂದರೆ 9ನೇ ಪ್ರಕರಣದ (ಖ) ಖಂಡದ ಮೇರೆಗೆ ಯಾವುದೇ ರಾಜ್ಯದಲ್ಲಿ ಸ್ಥಾಪಿಸಲಾದ ಬಳಕೆದಾರ ವಿವಾದಗಳ ಪರಿಹಾರ ಆಯೋಗ;

(ಓ) ಯಾವುವೇ ಸರಕುಗಳಿಗೆ ಸಂಬಂಧಪಟ್ಟಂತೆ "ವ್ಯಾಪಾರಿ" ಎಂದರೆ, ಮಾರಾಟಕ್ಕಾಗಿ ಯಾವುವೇ ಸರಕುಗಳನ್ನು ಮಾರಾಟ ಮಾಡುವ ಅಥವಾ ವಿತರಣೆ ಮಾಡುವ ವ್ಯಕ್ತಿ ಮತ್ತು ಅದರ ತಯಾರಕನನ್ನು ಅದು ಒಳಗೊಳ್ಳುತ್ತದೆ ಮತ್ತು ಅಂಥ ಸರಕುಗಳನ್ನು ಪ್ಯಾಕುಗಳ ರೂಪದಲ್ಲಿ ಮಾರಾಟ ಅಥವಾ ವಿತರಣೆ ಮಾಡಿದಲ್ಲಿ ಅವುಗಳನ್ನು ಪ್ಯಾಕು ಮಾಡುವವನನ್ನು ಅದು ಒಳಗೊಳ್ಳುತ್ತದೆ;

(ಪಿ) "ಅನುಚಿತ ವ್ಯಾಪಾರ ಪದ್ಧತಿ" ಎಂದ ಪದಾವಳಿಯು ಏಕಸ್ವಾಮ್ಯಗಳ ಮತ್ತು ಪರಿಬಂಧಕ ವ್ಯಾಪಾರ ಪದ್ಧತಿ ಅಧಿನಿಯಮ, 1969 (1969ರ 54)ದ 36ಕ ಪ್ರಕರಣದಲ್ಲಿರುವಂಥದೇ ಅರ್ಥವನ್ನು ಹೊಂದಿರತಕ್ಕದ್ದು. ಆದರೆ ಈ ಅಧಿನಿಯಮದ ನೇ ಅಧ್ಯಾಯದ ಕ ಭಾಗವು ಯಾವುದಕ್ಕೆ ಅನ್ವಯಿಸುತ್ತದೆಯೋ ಆ ಉದ್ಯಮದ ಒಡೆಯನು ಅಥವಾ ಅಂಥ ಒಡೆಯನ ಪರವಾಗಿ ಅಥವಾ ಅವನ ಪ್ರಯೋಜನಕ್ಕಾಗಿ ಕಾರ್ಯ ನಿರ್ವಹಿಸುತ್ತಿರುವ ಯಾವನೇ ಇತರ ವ್ಯಕ್ತಿಯು ಅಳವಡಿಸಿಕೊಂಡಿರುವ ಅನುಚಿತ ವ್ಯಾಪಾರ ಪದ್ಧತಿಯನ್ನು ಒಳಗೊಳ್ಳತಕ್ಕದ್ದಲ್ಲ.

(2) ಈ ಅಧಿನಿಯಮವು ಅನ್ವಯವಾಗುವಂಥ ಯಾವುದೇ ಪ್ರದೇಶದಲ್ಲಿ ಜಾರಿಯಲ್ಲಿರದಂಥ ಯಾವುದೇ ಇತರ ಅಧಿನಿಯಮ ಅಥವ ಅದರ ಉಪಬಂಧಗಳಿಗೆ ಈ ಅಧಿನಿಯಮದಲ್ಲಿ ಮಾಡಿದ ಯಾವುದೇ ಉಲ್ಲೇಖವನ್ನು ಅಂಥ ಪ್ರದೇಶದಲ್ಲಿ ಜಾರಿಯಲ್ಲಿರುವ ಸಂವಾದಿ ಅಧಿನಿಯಮ ಅಥವಾ ಅದರ ಉಪಬಂಧಕ್ಕೆ ಮಾಡಿದ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು.

**3. ಈ ಅಧಿನಿಯಮವು ಇತರ ಯಾವುದೇ ಕಾನೂನನ್ನು ಅಲ್ಪೀಕರಿಸತಕ್ಕದ್ದಲ್ಲ.**–ಈ ಅದಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳಿಗೆ ಹೆಚ್ಚಿಗೆಯಾಗಿ ಇರತಕ್ಕದ್ದು. ಆದರೆ ಅವುಗಳನ್ನು ಅಲ್ಪೀಕರಿಸತಕ್ಕದ್ದಲ್ಲ.

## ಅಧ್ಯಾಯ – II

## ಬಳಕೆದಾರ ಸಂರಕ್ಷಣಾ ಪರಿಷತ್ತುಗಳು

**4. ಕೇಂದ್ರ ಬಳಕೆದಾರ ಸಂರಕ್ಷಣಾ ಪರಿಷತ್ತು.–** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಕೇಂದ್ರ ಬಳಕೆದಾರ ಸಂರಕ್ಷಣಾ ಪರಿಷತ್ತು (ಇಲ್ಲಿ ಇನ್ನು ಮುಂದೆ ಕೇಂದ್ರ ಪರಿಷತ್ತು ಎಂದು ಉಲ್ಲೇಖಿಸಿದೆ) ಎಂದು ಕರೆಯಲಾಗುವ ಒಂದು ಪರಿಷತ್ತನ್ನು ಸ್ಥಾಪಿಸಬಹುದು.

(2) ಕೇಂದ್ರ ಪರಿಷತ್ತು ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ,–

(ಎ) ಕೇಂದ್ರ ಸರ್ಕಾರದ ಆಹಾರ ಮತ್ತು ನಾಗರಿಕ ಸರಬರಾಜುಗಳ ಇಲಾಖೆಯ ಪ್ರಭಾರದಲ್ಲಿರುವ ಮಂತ್ರಿ, ಅವನು ಅದರ ಅಧ್ಯಕ್ಷನಾಗಿರತಕ್ಕದ್ದು, ಮತ್ತು

(ಬಿ) ನಿಯಮಿಸಬಹುದಾದಂಥ ಹಿತಾಸಕ್ತಿಗಳನ್ನು ಪ್ರತಿನಿಧಿಸುವಷ್ಟು ಸಂಖ್ಯೆಯ ಇತರ ಸರ್ಕಾರಿ ಅಥವಾ ಸರ್ಕಾರೇತರ ಸದಸ್ಯರು.

5. **ಕೇಂದ್ರ ಪರಿಷತ್ತಿನ ಸಭೆಗಳಿಗಾಗಿ ಪ್ರಕ್ರಿಯೆ.–** (1) ಕೇಂದ್ರ ಪರಿಷತ್ತು ಅವಶ್ಯವಾದಾಗಲೆಲ್ಲಾ ಸಭೆ ಸೇರತಕ್ಕದ್ದು. ಆದರೆ ಪ್ರತಿ ವರ್ಷ ಮೂರಕ್ಕಿಂತ ಕಡಿಮೆ ಇಲ್ಲದ ಪರಿಷತ್ತಿನ ಸಭೆಗಳನ್ನು ನಡೆಸತಕ್ಕದ್ದು.

(2) ಕೇಂದ್ರ ಪರಿಷತ್ತು, ಅಧ್ಯಕ್ಷನು ಸೂಕ್ತವೆಂದು ಯೋಚಿಸಬಹುದಾದಂಥ ಕಾಲ ಮತ್ತು ಸ್ಥಳದಲ್ಲಿ ಸಭೆ ಸೇರತಕ್ಕದ್ದು ಮತ್ತು ಅದರ ವ್ಯವಹಾರದ ನಡೆವಳಿಕೆ ಬಗ್ಗೆ ನಿಯಮಿಸಬಹುದಾದಂಥ ಪ್ರಕ್ರಿಯೆಯನ್ನು ಪಾಲಿಸತಕ್ಕದ್ದು.

6. **ಕೇಂದ್ರ ಪರಿಷತ್ತಿನ ಉದ್ದೇಶಗಳು.–** (i) ಜೀವ ಮತ್ತು ಸ್ವತ್ತಿಗೆ ಅಪಾಯಕಾರಿಯಾದಂಥ ಸರಕುಗಳ ಕ್ರಯವಿಕ್ರಯದ ವಿರುದ್ಧ ಸಂರಕ್ಷಿಸಿಕೊಳ್ಳುವ ಹಕ್ಕು;

(ii) ಅನುಚಿತ ವ್ಯಾಪಾರ ಪದ್ಧತಿಗಳಿಂದ ಬಳಕೆದಾರನನ್ನು ಸಂರಕ್ಷಿಸಲು ಸರಕುಗಳ ಗುಣ, ಪರಿಮಾಣ, ಶಕ್ತಿ, ಶುದ್ಧತೆ, ಗುಣಮಟ್ಟ ಮತ್ತು ಬೆಲೆ – ಇವುಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳುವ ಹಕ್ಕು;

(iii) ಬಗೆ ಬಗೆಯ ಸರಕುಗಳನ್ನು ಸಾಧ್ಯವಿರುವಲ್ಲೆಲ್ಲಾ ಸ್ಪರ್ಧಾತ್ಮಕ ಬೆಲೆಗಳಲ್ಲಿ ಪಡೆಯಲು ಭರವಸೆಯ ಹಕ್ಕು; ಸೂಕ್ತವಾಗಿ ಪರಿಗಣಿಸಲಾಗುವ ಭರವಸೆಯ ಹಕ್ಕು;

(iv) ಅನುಚಿತ ವ್ಯಾಪಾರ ಪದ್ಧತಿಗಳು ಅಥವಾ ಬಳಕೆದಾರರ ನಿರ್ಲಜ್ಜ ಶೋಷಣೆಯ ವಿರುದ್ಧ ಪರಿಹಾರವನ್ನು ಕೋರುವ ಹಕ್ಕು; ಮತ್ತು

(v) ಬಳಕೆದಾರ ಶಿಕ್ಷಣಕ್ಕೆ ಹಕ್ಕು

–ಇವುಗಳಂಥ ಬಳಕೆದಾರರ ಹಕ್ಕುಗಳನ್ನು ಬೆಳೆಸುವುದು ಮತ್ತು ಸಂರಕ್ಷಿಸುವುದು ಕೇಂದ್ರ ಪರಿಷತ್ತಿನ ಉದ್ದೇಶಗಳಾಗಿರತಕ್ಕದ್ದು.

**7. ರಾಜ್ಯ ಬಳಕೆದಾರ ಸಂರಕ್ಷಣಾ ಪರಿಷತ್ತುಗಳು.–** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಪರಿಣಾಮಕಾರಿಗುವಂತೆ ---- ಗಾಗಿ (ಇಲ್ಲಿ ಇನ್ನು ಮುಂದೆ ರಾಜ್ಯ ಪರಿಷತ್ತು ಎಂದು ಉಲ್ಲೇಖಿಸಿದ) ಬಳಕೆದಾರ ಸಂರಕ್ಷಣಾ ಪರಿಷತ್ತು ಎಂದು ಕರೆಯಲಾಗುವ ಒಂದು ಪರಿಷತ್ತನ್ನು ಸ್ಥಾಪಿಸಬಹುದು.

(2) ರಾಜ್ಯ ಪರಿಷತ್ತು ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಸದಸ್ಯರನ್ನೊಳಗೊಂಡಿರತಕ್ಕದ್ದು.

**8. ರಾಜ್ಯ ಪರಿಷತ್ತಿನ ಉದ್ದೇಶಗಳು.–** ಪ್ರತಿಯೊಂದು ರಾಜ್ಯ ಪರಿಷತ್ತಿನ ಉದ್ದೇಶಗಳು, ರಾಜ್ಯದೊಳಗೆ 6ನೇ ಪ್ರಕರಣದ () ರಿಂದ () ವರೆಗಿನ ಖಂಡಗಳಲ್ಲಿ ಹೇಳಲಾದ ಬಳಕೆದಾರರ ಹಕ್ಕುಗಳನ್ನು ಬೆಳೆಸುವುದು ಮತ್ತು ಸಂರಕ್ಷಿಸುವುದು ಆಗಿರತಕ್ಕದ್ದು.

## ಅಧ್ಯಾಯ – III

## ಬಳಕೆದಾರ ವಿವಾದಗಳ ಪರಿಹಾರ ಏಜೆನ್ಸಿಗಳು

**9. ಬಳಕೆದಾರ ವಿವಾದಗಳ ಪರಿಹಾರ ಏಜೆನ್ಸಿಗಳ ಸ್ಥಾಪನೆ.–** ಈ ಅಧಿನಿಯಮದ ಉದ್ದೇಶಗಳಿಗಾಗಿ ಕೆಳಕಂಡ ಏಜೆನ್ಸಿಗಳನ್ನು ಸ್ಥಾಪಿಸತಕ್ಕದ್ದು, ಎಂದರೆ.–

(ಎ) ಅಧಿಸೂಚನೆಯ ಮೂಲಕ ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿ ಕೇಂದ್ರ ಸರ್ಕಾರದ ಪೂರ್ವ ಅನುಮೋದನೆಯೊಂದಿಗೆ ರಾಜ್ಯ ಸರ್ಕಾರವು ಸ್ಥಾಪಿಸಿದ "ಜಿಲ್ಲಾ ನ್ಯಾಯಾಧಿಕರನ" ಎಂದು ಕರೆಯಲಾಗುವ ಒಂದು ಬಳಕೆದಾರ ವಿವಾದಗಳ ಪರಿಹಾರ ನ್ಯಾಯಾಧಿಕರಣ;

(ಬಿ) ಅಧಿಸೂಚನೆಯ ಮೂಲಕ ರಾಜ್ಯದಲ್ಲಿ ಕೇಂದ್ರ ಸರ್ಕಾರದ ಪೂರ್ವ ಅನುಮೋದನೆಯೊಂದಿಗೆ ರಾಜ್ಯ ಸರ್ಕಾರ ಸ್ಥಾಪಿಸಿದ " ರಾಜ್ಯ ಆಯೋಗ" ಎಂದು ಕರೆಯಲಾಗುವ ಒಂದು ಬಳಕೆದಾರ ವಿವಾದಗಳ ಪರಿಹಾರ ವಿವಾದಗಳ ಪರಿಹಾರ ಆಯೋಗ; ಮತ್ತು

(ಸಿ) ಅಧಿಸೂಚನೆಯ ಮೂಲಕ ಕೇಂದ್ರ ಸರ್ಕಾರವು ಸ್ಥಾಪಿಸಿದ ರಾಷ್ಟ್ರೀಯ ಬಳಕೆದಾರ ವಿವಾದಗಳ ಪರಿಹಾರ ಆಯೋಗ.

**10. ಜಿಲ್ಲಾ ನ್ಯಾಯಾಧಿಕರಣದ ರಚನೆ.–** (1) ಪ್ರತಿಯೊಂದು ಜಿಲ್ಲಾ ವೇದಿಕೆಯು–

(ಎ) ಅದರ ಅಧ್ಯಕ್ಷನಾಗಿರಲು ರಾಜ್ಯ ಸರ್ಕಾರವು ನಾಮ ನಿರ್ದೇಶನ ಮಾಡಬೇಕಾದ ಜಿಲ್ಲಾ ನ್ಯಾಯಾಧೀಶನಾಗಿರುವ ಅಥವಾ ಆಗಿದ್ದ ಅಥವಾ ಆಗಲು ಅರ್ಹತೆ ಹೊಂದಿರುವ ವ್ಯಕ್ತಿ;

(ಬಿ) ಶಿಕ್ಷಣ, ವ್ಯಾಪಾರ ಅಥವಾ ವಾಣಿಜ್ಯ ಕ್ಷೇತ್ರದ ಹಿರಿಮೆಯ ವ್ಯಕ್ತಿ;

(ಸಿ) ಒಬ್ಬ ಮಹಿಳಾ ಸಮಾಜ ಕಾರ್ಯಕರ್ತೆ

–ಇವರನ್ನು ಒಳಗೊಂಡಿರತಕ್ಕದ್ದು.

(2) ಜಿಲ್ಲಾ ನ್ಯಾಯಾಧಿಕರಣದ ಪ್ರತಿಯೊಬ್ಬ ಸದಸ್ಯನು ಐದು ವರ್ಷದ ಅವಧಿಯವರೆಗೆ ಅಥವಾ 65 ವರ್ಷಗಳ ವಯಸ್ಸಾಗುವವರೆಗೆ ಅವುಗಳಲ್ಲಿ ಯಾವುದು ಮುಂಚಿನದೋ ಅಲ್ಲಿಯವರೆಗೆ ಪದಧಾರಣ ಮಾಡತಕ್ಕದ್ದು ಮತ್ತು ಮರು ನೇಮಕಾತಿಗೆ ಅರ್ಹನಾಗಿರತಕ್ಕದ್ದಲ್ಲ.

ಪರಂತು, ಸದಸ್ಯನು ರಾಜ್ಯ ಸರ್ಕಾರಕ್ಕೆ ಸಂಬೋಧಿಸಿ ಅವನು ಸಹಿ ಮಾಡಿದ ಬರಹದ ಮೂಲಕ ಅವನ ಪದಕ್ಕೆ ರಾಜೀನಾಮೆ ಕೊಡಬಹುದು ಮತ್ತು ಅಂಥ ರಾಜೀನಾಮೆಯು ಅಂಗೀಕೃತವಾದ ಮೇಲೆ ಆತನ ಪದವು ಖಾಲಿಯಾಗತಕ್ಕುದ್ದು ಮತ್ತು ರಾಜಿನಾಮೆಯನ್ನು ಕೊಟ್ಟಿರುವ ಸದಸ್ಯನ ಪ್ರವರ್ಗಕ್ಕೆ ಸಂಬಂಧಪಟ್ಟಂತೆ (1) ನೇ ಉಪ–ಪ್ರಕರಣದಲ್ಲಿ ನಮೂದಿಸಿದ ಯಾವುದೇ ಅರ್ಹತೆಯನ್ನು ಹೊಂದಿರುವ ವ್ಯಕ್ತಿಯನ್ನು ನೇಮಕಾತಿಯ ಮೂಲಕ ಭರ್ತಿ ಮಾಡಬಹುದು.

(3) ಜಿಲ್ಲಾ ನ್ಯಾಯಾಧಿಕರಣದ ಸದಸ್ಯರಿಗೆ ಸಂದಾಯ ಮಾಡಬೇಕಾದ ಸಮಬಲ ಅಥವಾ ಗೌರವಧನ ಮತ್ತು ಇತರ ಭತ್ಯಗಳು ಮತ್ತು ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥವು ಆಗಿರತಕ್ಕದು.

**11. ಜಿಲ್ಲಾ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿ.**–(1) ಈ ಅಧಿನಿಯಮದ ಇತರಉಪಬಂಧಗಳಿಗೊಳಪಟ್ಟು, ಜಿಲ್ಲಾ ನ್ಯಾಯಾಧಿಕರಣವು, ಸರಕುಗಳ ಅಥವಾ ಸೇವೆಗಳ ಮತ್ತು ಕ್ಲೇಮು ಮಾಡಿದ ನಷ್ಟ ಪರಿಹಾರ ಯಾವುದಾದರೂ ಇದ್ದರೆ, ಅದರ ಮೌಲ್ಯವು ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಇರುವಲ್ಲಿ ಫಿರ್ಯಾದುಗಳನ್ನು ಪುರಸ್ಕರಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದು.

(2) ಯಾವುದರ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ,–

(ಎ) ಎದುರು ಪಕ್ಷಕಾರ ಅಥವಾ ಒಬ್ಬನಿಗಿಂತ ಹೆಚ್ಚು ಎದುರು ಪಕ್ಷಕಾರರು ಇರುವಲ್ಲಿ, ಪ್ರತಿಯೊಬ್ಬ ಎದುರುಪಕ್ಷಕಾರನು ಫಿರ್ಯಾದನ್ನು ಹುಡುವ ಕಾಲದಲ್ಲಿ ವಾಸ್ತವವಾಗಿ ಮತ್ತು ಸ್ವಿಚ್ಛೆಯಿಂದ

ವಾಸವಾಗಿದ್ದಾನೋ ಅಥವಾ ವ್ಯವಹಾರವನ್ನು ನಡೆಸುತ್ತಿದ್ದಾನೋ ಅಥವಾ ಲಾಭಕ್ಕಾಗಿ ಖುದ್ದಾಗಿ ದುಡಿಯುತ್ತಿದ್ದಾನೋ; ಅಥವಾ

(ಬಿ) ಒಬ್ಬನಿಗಿಂತ ಹೆಚ್ಚು ಎದುರು ಪಕ್ಷಕಾರರು ಇರುವಲ್ಲಿ, ಅವರಲ್ಲಿ ಯಾವನಾದರೂ ಫಿರ್ಯಾದು ಹುಡುವ ಕಾಲದಲ್ಲಿ ವಾಸ್ತವವಾಗಿ ಮತ್ತು ಸ್ವ ಇಚ್ಛೆಯಿಂದ ವಾಸವಾಗಿದ್ದಾನೋ ಅಥವಾ ವ್ಯವಹಾರವನ್ನು ನಡೆಸುತ್ತಿದ್ದಾನೋ ಅಥವಾ ಲಾಭಕ್ಕಾಗಿ ಖುದ್ದಾಗಿ ದುಡಿಯುತ್ತಿದ್ದಾನೋ, ಪರಂತು ಸಂದರ್ಭಾನುಸಾರ ಅಂಥ ಪ್ರಕರಣದಲ್ಲಿ ಜಿಲ್ಲಾ ನ್ಯಾಯಾಧಿಕರಣವು ಅನುಮತಿಯನ್ನು ಕೊಟ್ಟಿರಬೇಕು ಅಥವಾ ವಾಸಿಸದೇ ಇರುವ ಅಥವಾ ವ್ಯವಹಾರವನ್ನು ನಡೆಸದೇ ಇರುವ ಅಥವಾ ಲಾಭಕ್ಕಾಗಿ ಖುದ್ದಾಗಿ ದುಡಿಯದೇ ಇರುವ ಪಕ್ಷಕಾರರು ಅಮಥ ಹೂಡುವುದರ ಬಗ್ಗೆ ಮೌನ ಸಮ್ಮತಿಯನ್ನು ಕೊಟ್ಟಿರಬೇಕು:

(ಸಿ) ವಾಜ್ಯ ಕಾರಣವು ಪೂರ್ಣವಾಗಿ ಭಾಗಶಃ ಉದ್ಭವಿಸಿರುವುದೋ.

ಆ ಜಿಲ್ಲಾ ನ್ಯಾಯಾಧಿಕರಣದಲ್ಲಿ ಫಿರ್ಯಾದನ್ನು ಹೂಡತಕ್ಕದು.

12. **ಫಿರ್ಯಾದನ್ನು ಮಾಡತಕ್ಕಂಥ ರೀತಿ.–** ಮಾರಾಟ ಮಾಡಿದ ಅಥವಾ ವಶಾವಣೆ ಮಾಡಿದ ಯಾವುದೇ ಸರಕುಗಳಿಗೆ ಅಥವಾ ಒದಗಿಸಿದ ಯಾವುದೇ ಸೇವೆಗೆ ಸಂಬಂಧಪಟ್ಟಂತೆ ಫಿರ್ಯಾದನ್ನು,–

(ಎ) ಯಾರಿಗೆ ಅಂಥ ಸರಕುಗಳನ್ನು ಮಾರಲಾಗಿದೆಯೋ ಅಥವಾ ವಶಾವಣೆ ಮಾಡಲಾಗಿದೆಯೋ ಅಥವಾ ಅಂಥ ಸೇವೆಯನ್ನು ಒದಗಿಸಲಾಗಿದೆಯೋ ಆ ಬಳಕೆದಾರನು ಅಂಥ ಸಂಘದ ಸದಸ್ಯನಾಗಲಿ ಅಥವಾ ಆಗಿಲ್ಲದೇ ಇರಲಿ ಆ ಯಾವುದೇ ಮನ್ನಣೆ ಪಡೆದ ಬಳಕೆದಾರ ಸಂಘ; ಅಥವಾ

(ಬಿ) ಕೇಂದ್ರ ಅಥವಾ ರಾಜ್ಯ ಸರ್ಕಾರವು

–ಫಿರ್ಯಾದನ್ನು ಜಿಲ್ಲಾ ನ್ಯಾಯಧಿಕರಣದಲ್ಲಿ ದಾಖಲು ಮಾಡಬಹುದು.

**ವಿವರಣೆ:–** ಈ ಪ್ರಕರಣದ ಉದ್ದೇಶಕ್ಕಾಗಿ **‘**ಮನ್ನಣೆ ಪಡೆದ ಬಳಕೆದಾರ ಸಂಘ**’** ಎಂದರೆ, ಕಂಪನಿಗಳ ಅಧಿನಿಯಮ, 1956 (1956 ರ 1) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ನೋಂದಾಯಿತವಾದ ಯಾವುದೇ ಸ್ವಯಂ ಸೇವಾ ಬಳಕೆದಾರರ ಸಂಘ.

**13. ಫಿರ್ಯಾದುಗಳನ್ನು ಸ್ವೀಕರಿಸಿದ ಮೇಲೆ ಪ್ರಕ್ರಿಯೆ.**–(1) ಫಿರ್ಯಾದನ್ನು ಸ್ವೀಕರಿಸಿದ ಮೇಲೆ ಅದು ಯಾವುದೇ ಸರಕುಗಳಿಗೆ ಸಂಬಂಧಪಟ್ಟಂತೆ ಜಿಲ್ಲಾ ನ್ಯಾಯಾಧಿಕರಣವು,–

(ಎ) ಫಿರ್ಯಾದಿನ ಒಂದು ಪ್ರತಿಯನ್ನು ಎದುರು ಪಕ್ಷಕಾರನಿಗೆ ಫಿರ್ಯಾದಿನಲ್ಲಿ ನಮೂದಿಸಿದ 30 ದಿವಸಗಳ ಅವಧಿಯೊಳಗೆ ಅಥವಾ ಜಿಲ್ಲಾ ನ್ಯಾಯಾಧಿಕರಣವು ಮಂಜೂರು ಮಾಡಬಹುದಾದಂಥ 15 ದಿವಸಗಳನ್ನು ಮೀರದಂತೆ ವಿಸ್ತರಿಸಿದ ಅವಧಿಯೊಳಗೆ ಪ್ರಕರಣದ ಬಗ್ಗೆ ಅವನ ಹೇಳಿಕೆಯನ್ನು ಕೊಡಲು ಅವನಿಗೆ ನಿರ್ದೇಶಿಸಿ ಕಳುಹಿಸತಕ್ಕದ್ದು.

(ಬಿ) (ಎ) ಖಂಡದ ಮೇರೆಗೆ ಅವನಿಗೆ ಕಳುಹಿಸಿದ ಫಿರ್ಯಾದನ್ನು ಸ್ವೀಕರಿಸಿದ ಮೇಲೆ ಎದುರು ಪಕ್ಷಕಾರನು ಆ ಫಿರ್ಯಾದಿನಲ್ಲಿರುವ ಆಪಾದನೆಗಳನ್ನು ಅಲ್ಲಗಳೆಯುವಲ್ಲಿ ಅಥವಾ ಅವುಗಳನ್ನು ವಿವಾದಿಸುವಲ್ಲಿ ಅಥವಾ ಜಿಲ್ಲಾ ನ್ಯಾಯಾಧಿಕರಣವು ಕೊಟ್ಟ ಕಾಲದೊಳಗೆ ಅವನ ವಾದವನ್ನು ನಿವೇದಿಸಲು ಯಾವುದೇ ಕ್ರಮವನ್ನು ತೆಗೆದುಕೊಳ್ಳಲು ಲೋಪ ಮಾಡುವಲ್ಲಿ ಅಥವಾ ತಪ್ಪುವಲ್ಲಿ ಜಿಲ್ಲಾ ನ್ಯಾಯಧಿಕರಣವು (ಗ) ದಿಂದ (ಚ) ವರೆಗಿನ ಖಂಡಗಳಲ್ಲಿ ನಿರ್ದಿಷ್ಟ ಪಡಿಸಿದ ರೀತಿಯಲ್ಲಿ ಬಳಕೆದಾರನ ವಿವಾದವನ್ನು ಇತ್ಯರ್ಥಪಡಿಸಲು ಮುಂದುವರಿಯತಕ್ಕದ್ದು.

(ಸಿ) ಫಿರ್ಯಾದಿಯು ಸರಿಯಾದ ವಿಶ್ಲೇಷಣೆ ಅಥವಾ ಪರೀಕ್ಷೆಯಿಲ್ಲದೆ ನಿರ್ಧರಿಸಲಾಗದಂಥ ಸರಕುಗಳ ದೋಷವನ್ನು ಆಪಾದಿಸಿರುವಲ್ಲಿ ಜಿಲ್ಲಾ ನ್ಯಾಯಾಧಿಕರಣವು ಫಿರ್ಯಾದಿನಲ್ಲಿ ಸರಕುಗಳ ಮಾದರಿಯನ್ನು ಪಡೆಯತಕ್ಕದ್ದು, ಅದಕ್ಕೆ ಮೊಹರು ಮಾಡತಕ್ಕದ್ದು ಮತ್ತು ನಿಯಮಿಸಿದ ರೀತಿಯಲ್ಲಿ ಅದನ್ನು ಅಧಿಪ್ರಮಾಣಿಸತಕ್ಕದ್ದು ಮತ್ತು ಹಾಗೆ ಮೊಹರು ಮಾಡಿದ ಮಾದರಿಯನ್ನು ಸಮುಚಿತ ಪ್ರಯೋಗಾಲಕ್ಕೆ ಫಿರ್ಯಾದಿನಲ್ಲಿ ಆರೋಪಿಸಲಾದ ಯಾವುದೇ ದೋಷಗಳನ್ನು ಅಂಥ ಸರಕುಗಳು ಹೊಂದಿವೆಯೋ ಅಥವಾ ಇತರ ಯಾವುದೇ ದೋಷವನ್ನು ಹೊಂದಿವೆಯೋ ಹೇಗೆ ಎಂಬುದನ್ನು ಕಂಡುಹಿಡಿಯುವ ದೃಷ್ಟಿಯಿಂದ ಯಾವುದೇ ಅವಶ್ಯವಾಗಬಹುದದ ವಿಶ್ಲೇಷಣೆ ಅಥವಾ ಪರೀಕ್ಷೆಯನ್ನು ಮಾಡಲು ಮತ್ತು ಆ ಉಲ್ಲೇಖವನ್ನು ಸ್ವೀಕರಿಸಿದ 45 ದಿವಸಗಳ ಅವಧಿಯೊಳಗೆ ಅಥವಾ ಜಿಲ್ಲಾ ನ್ಯಾಯಾಧಿಕರಣವು ಮಂಜೂರು ಮಾಡಬಹುದಾದಂಥ ವಿಸ್ತರಿಸಿದ ಅವಧಿಯೊಳಗೆ ಜಿಲ್ಲಾ ನ್ಯಾಯಾಧಿಕರಣವು ವರದಿಯನ್ನು ಮಾಡಬೇಕೆಂಬ ನಿರ್ದೇಶನದೊಂದಿಗೆ ಕಳುಹಿಸತಕ್ಕದ್ದು.

(ಡಿ) (ಗ) ಖಂಡದ ಮೇರೆಗೆ ಯಾವುದೇ ಸಮುಚಿತ ಪ್ರಯೋಗಾಲಯಕ್ಕೆ ಸರಕುಗಳ ಯಾವುದೇ ಮಾದರಿಯನ್ನು ಕಳುಹಿಸುವುದಕ್ಕೆ ಮುಂಚೆ ಜಿಲ್ಲಾ ನ್ಯಾಯಾಧಿಕರಣವು ಪ್ರಶ್ನಿತ ಸರಕುಗಳಿಗೆ ಸಂಬಂಧಪಟ್ಟಂತೆ ಅವಶ್ಯ ವಿಶ್ಲೇಷಣೆ ಅಥವಾ ಪರೀಕ್ಷೆಯನ್ನು ಮಾಡುವುದಕ್ಕಾಗಿ ಸಮುಚಿತ

ಪ್ರಯೋಗಾಲಯಕ್ಕೆ ಸಮದಾಯ ಮಾಡಲು ನಿರ್ದಿಷ್ಟಪಡಿಸಬಹುದಾದಂಥ ಫೀಜನ್ನು ನ್ಯಾಯಧಿಕರಣದ ಜಮೆಗೆ ತವಣಿ ಇಡಲು ಫಿರ್ಯಾದಿಯನ್ನು ಅಗತ್ಯಪಡಿಸತಕ್ಕದ್ದು.

(ಇ) ಜಿಲ್ಲಾ ನ್ಯಾಯಧಿಕರಣವು (ಫ) ಖಂಡದ ಮೇರೆಗೆ ಅದರ ಲೆಕ್ಕಕ್ಕೆ ಠೇವಣಿ ಮಾಡಿದ ಮೊಬಲಗನ್ನು (ಗ) ಖಂಡದಲ್ಲಿ ನಮೂದಿಸಿದ ವಿಶ್ಲೇಷಣೆ ಅಥವಾ ಪರೀಕ್ಷೆಯನ್ನು ನಡೆಸಲು ಸಮುಚಿತ ಪ್ರಯೋಗಾಲಯಕ್ಕೆ ಕಳುಹಿಸತಕ್ಕದ್ದು. ಸಮುಚಿತ ಪ್ರಯೋಗಾಲಯದಿಂದ ವರದಿಯನ್ನು ಸ್ವಿಕರಿಸಿದ ಮೇಲೆ ಜಿಲ್ಲಾ ನ್ಯಾಯಾಧಿಕರಣವು ವರದಿಯ ಒಂದು, ಪ್ರತಿಯನ್ನು ಜಿಲ್ಲಾ ನ್ಯಾಯದಿಕರಣವು ಯುಕ್ತವೆಂದು ಭಾವಿಸಿಸಬುದಾದಂಥ ಷರಾಗಳೊಂದಿಗೆ ಎದುರು ಪಕ್ಷಕಾರನಿಗೆ ಕಳುಹಿಸತಕ್ಕದು.

(ಎಫ್) ಯಾವುದೇ ಪಕ್ಷಕಾರನು ಸಮುಚಿತ ಪ್ರಯೋಗಾಲಯದ ನಿರ್ಣಯಗಳ ಸರಿತನದ ಬಗ್ಗೆ ವಿವಾದಿಸಿದರೆ ಅಥವಾ ಸಮುಚಿತ ಪ್ರಯೋಗಾಲಯವು ಅನುಸರಿಸಿದ ವಿಶ್ಲೇಷಣೆ ಅಥವಾ ಪರೀಕ್ಷೆಯ ವಿಧಾನಗಳ ಸರಿತನದ ಬಗ್ಗೆ ವಿವಾದಿಸಿದರೆ ಜಿಲ್ಲಾ ನ್ಯಾಯಾಧಿಕರಣವು ಸಮುಚಿತ ಪ್ರಯೋಗಾಲಯವು ಮಾಡಿದ ವರದಿಯ ಬಗ್ಗೆ ಅವನ ಆಕ್ಷೇಪಣೆಗಳನ್ನು ಬರಹದಲ್ಲಿ ಒಪ್ಪಿಸಲು ಪ್ರತಿಪಕ್ಷಕಾರ ಅಥವಾ ಫಿರ್ಯಾದಿಯನ್ನು ಅಗತ್ಯಪಡಿಸತಕ್ಕದ್ದು.

(ಜಿ) ಜಿಲ್ಲಾ ನ್ಯಾಯಧಿಕರಣವು ಆ ತರುವಾಯ, ಸಮುಚಿತ ಪ್ರಯೋಗಾಲಯವು ಮಾಡಿದ ವರದಿಯ ಸಂಸತ ಅಥವಾ ಇತರ ವಿಷಯದ ಬಗ್ಗೆ ಮತ್ತು (ಚ) ಖಂಡದ ಮೇರೆಗೆ ಅದಕ್ಕೆ ಸಂಬಂಧಪಟ್ಟಂತೆ ಮಾಡಿದ ಆಕ್ಷೇಪಣೆಯ ಬಗ್ಗೆ ಸಹ ಅಹವಾಲನ್ನು ಹೇಳಿಕೊಳ್ಳಲು ಫಿರ್ಯಾದಿ ಮತ್ತು ಎದುರು ಪಕ್ಷಕಾರನಿಗೆ ಯುಕ್ತ ಅವಕಾಶವನ್ನು ನೀಡತಕ್ಕದ್ದು ಮತ್ತು 14 ನೇ ಪ್ರಕರಣದ ಮೇರೆಗೆ ಸಮುಚಿತ ಆದೇಶವನ್ನು ಹೊರಡಿಸತಕ್ಕದ್ದು.

(2) (1) ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯನ್ನು ಅನುಸರಿಸಲಾಗದಂಥ ಸರಕುಗಳಿಗೆ 12 ನೇ ಪ್ರಕರಣದ ಮೇರೆಗೆ ಅದು ಸ್ವೀಕರಿಸಿದ ಫಿರ್ಯಾದು ಸಂಬಂಧಪಟ್ಟರೆ ಅಥವಾ ಆ ಫಿರ್ಯಾದು ಯಾವುದೇ ಸೇವೆಗಳಿಗೆ ಸಂಬಂಧಪಟ್ಟರೆ ಜಿಲ್ಲಾ ನ್ಯಾಯಾಧಿಕರಣವು,-

(ಎ) ಅಂಥ ಫಿರ್ಯಾದಿನ ಒಂದು ಪ್ರತಿಯೊಂದು ಎದುರು ಪಕ್ಷಕಾರನಿಗೆ ಮೂವತ್ತು ದಿವಸಗಳ ಅವಧಿಯೊಳಗೆ ಅಥವಾ ಜಿಲ್ಲಾ ನ್ಯಾಯಧಿಕರಣವು ಮಂಜೂರು ಮಾಡಬಹುದಾದಂಥ 15 ದಿವಸಗಳನ್ನು ಮೀರಿದ ವಿಸ್ತರಿಸಿದ ಅವಧಿಯೊಳಗೆ ಪ್ರಕರಣದ ಬಗ್ಗೆ ಅವನ ಹೇಳಿಕೆಯನ್ನು ಕೊಡಲು ಅವನನ್ನು ನಿರ್ದೇಶಿಸಿ ಕಳುಹಿಸತಕ್ಕದ್ದು,

(ಬಿ) (ಕ) ಖಂಡದ ಮೇರೆಗೆ ಅವನಿಗೆ ಕಳುಹಿಸಿದ ಫಿರ್ಯಾದಿನ ಪ್ರತಿಯನ್ನು ಸ್ವೀಕರಿಸಿದ ಮೇಲೆ ಎದುರು ಪಕ್ಷಕಾರನು ಆ ಫಿರ್ಯಾದಿನಲ್ಲಿರುವ ಆಪಾದನೆಗಳನ್ನು ಅಲ್ಲಗಳೆಯುವಲ್ಲಿ ಅಥವಾ ಅವುಗಳನ್ನು ವಿವಾದಿಸುವಲ್ಲಿ ಅಥವಾ ಜಿಲ್ಲಾ ನ್ಯಾಯಧಿಕರಣವು ಕೊಟ್ಟ ಕಾಲದೊಳಗೆ ಅವನ ವಾದವನ್ನು ನೀವೆದಿಸಲು ಯಾವುದೇ ಕ್ರಮವನ್ನು ತೆಗೆದುಕೊಳ್ಳಲು ಲೋಪಿಸುವಲ್ಲಿ ಅಥವಾ ತಪ್ಪುವಲ್ಲಿ ಜಿಲ್ಲಾ ನ್ಯಾಯಧಿಕರಣವು ಆ ಬಳಕೆದಾರನ ವಿವಾದವನ್ನು,–

(i) ಫಿರ್ಯಾದಿನಲ್ಲಿರುವ ಒಳ ಆಪಾದನೆಗಳನ್ನು ಎದುರು ಪಕ್ಷಕಾರನು ಅಲ್ಲಗಳೆಯುವಲ್ಲಿ ಅಥವಾ ವಿವಾದಿಸುವಲ್ಲಿ ಫಿರ್ಯಾದಿ ಮತ್ತು ಎದುರು ಪ್ರತಿಪಕ್ಷಕಾರನು ಅದರ ಗಮನಕ್ಕೆ ತಂದ ಸಾಕ್ಷದ ಆಧಾರದ ಮೇಲೆ; ಅಥವಾ

(ii) ಆ ನ್ಯಾಯಧಿಕರಣದವು ಕೊಟ್ಟ ಕಾಲದೊಳಗೆ ಅವನ ವಾದವನ್ನು ನಿವೇದಿಸಲು ಯಾವುದೇ ಕ್ರಮವನ್ನು ತೆಗೆದುಕೊಳ್ಳಲು ಎದುರು ಪಕ್ಷಕಾರನು ಲೋಪಿಸುವಲ್ಲಿ ಅಥವಾ ತಪ್ಪುವಲ್ಲಿ ಫಿರ್ಯಾದಿಯು ಅದರ ಗಮನಕ್ಕೆ ತಂದ ಸಾಕ್ಷದ ಆಧಾರದ ಮೇಲೆ ಇತ್ಯರ್ಥಪಡಿಸಲು ಮುಂದುವರಿಯತಕ್ಕದ್ದು.

(3) (1) ಮತ್ತು (2) ನೇ ಉಪ–ಪ್ರಕರಣಗಳಲ್ಲಿ ವಿಧಿಸಿದ ಪ್ರಕ್ರಿಯೆಯನ್ನು ಪಾಲಿಸಿರುವ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

(4) ಈ ಪ್ರಕರಣದ ಉದ್ದೇಶಗಳಿಗಾಗಿ ಜಿಲ್ಲಾ ನ್ಯಾಯಧಿಕರಣದವು ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ದಾವೆಯನ್ನು ಅಧಿವಿಚಾರಣೆ ಮಾಡುವಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908 ರ 5) ಮೇರೆಗೆ ಸಿವಿಲ್ ನ್ಯಾಯಲಯದಲ್ಲಿ ನಿಹಿತವಾಗಿರುವಂಥದೇ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(i) ಯಾವುದೇ ಪ್ರತಿವಾದಿ ಅಥವಾ ಸಾಕ್ಷಿಯನ್ನು ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಿಸುವಲ್ಲಿ ಮತ್ತು ಪ್ರಮಾಣದ ಮೇಲೆ ಸಾಕ್ಷಿದಾರರನ್ನು ಪರೀಕ್ಷಿಸುವುದು;

(ii) ಸಾಕ್ಷ್ಯವಾಗಿ ಹಾಜರುಪಡಿಸಬಹುದಾದ ಯಾವುದೇ ಇತರ ಮಾಲನ್ನು ಕಂಡುಹಿಡಿಯುವುದು ಮತ್ತು ಹಾಜರುಪಡಿಸುವುದು;

(iii) ಶಪಥ ಪತ್ರಗಳ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(iv) ಸಮುಚಿತ ಪ್ರಯೋಗಾಲಯ ಅಥವಾ ಯಾವುದೇ ಇತರ ಸಂಬಂಧಪಟ್ಟ ಮೂಲದಿಂದ ಸಂಬಂಧಿಸಿದ ವಿಶ್ಲೇಷಣೆ ಅಥವಾ ಪರೀಕ್ಷೆಯ ವರದಿಯನ್ನು ಕಡ್ಡಾಯವಾಗಿ ಕೋರುವುದು;

(v) ಯಾವನೇ ಸಾಕ್ಷಿದಾರನ ಪರೀಕ್ಷೆಗಾಗಿ ಯಾವದೇ ಕಮೂಷನ್ನು ಹೊರಡಿಸುವುದು; ಮತ್ತು

(vi) ನಿಯಮಿಸಬಹುದಾದ ಯಾವುದೇ ಇತರ ವಿಷಯ.

(5) ಜಿಲ್ಲಾ ನ್ಯಾಯಧಿಕರಣದ ಮುಂದೆ ಇರುವ ಪ್ರತಿಯೊಂದು ವ್ಯವಹರಣೆಯನ್ನು ಭಾರತ ದಂಡ ಸಂಹಿತೆಯ (1860ರ 45) 193 ಮತ್ತು 228 ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ನ್ಯಾಯಿಕ ವ್ಯವಹರಣೆ ಎಂಬುದಾಗಿ ಭಾವಿಸತಕ್ಕದ್ದು ಮತ್ತು ಜಿಲ್ಲಾ ನ್ಯಾಯಾಧಿಕರಣವನ್ನು ದಂಡ ಪ್ರಕ್ರಿಯೆ ಸಂಹಿತೆ, 1973 (1974 ರ 2)ಯ 195 ನೇ ಪ್ರಕರಣದ ಮತ್ತು ನೇ ಅಧ್ಯಾಯದ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯ ಎಂಬುದಾಗಿ ಭಾವಿಸತಕ್ಕದು.

**14. ಜಿಲ್ಲಾ ನ್ಯಾಯಾಧಿಕರಣದ ನಿರ್ಣಯ.**–(1) 13ನೇ ಪ್ರಕರಣದ ಮೇರೆಗೆ ವ್ಯವಹರಣೆಯನ್ನುನಡೆಸಿದ ತರುವಾಯ ಫಿರ್ಯಾದು ಮಾಡಲಾದ ಸರಕುಗಳು ಫಿರ್ಯಾದಿನಲ್ಲಿ ನಿರ್ದಿಷ್ಟ ಪಡಿಸಿದ ಯಾವುದೇ ದೋಷವನ್ನು ಹೊಂದಿರುವುದೆಂದು ಅಥವಾ ಸೇವೆಗಳ ಬಗ್ಗೆ ಫಿರ್ಯಾದಿನಲ್ಲಿ ಇರುವ ಯಾವುದೇ ಆಪದನೆಯು ರುಜುವಾತಾಗಿದೆ ಎಂದು ಜಿಲ್ಲಾ ನ್ಯಾಯಾಧಿಕರಣಕ್ಕೆ ಮನದಟ್ಟಾದರೆ, ಅದು ಕೆಳಕಂಡ ಒಂದು ಅಥವಾ ಹೆಚ್ಚು ಕ್ರಮಗಳನ್ನು ಕೈಗೊಳ್ಳುವಂತೆ ಅವನಿಗೆ ನಿರ್ದೇಶಿಸಿ ಎದುರು ಪಕ್ಷಕಾರನಿಗೆ ಆದೇಶವನ್ನು ಹೊರಡಿಸತಕ್ಕದು, ಎಂದರೆ:–

(ಎ) ಸಮುಚಿತ ಪ್ರಯೋಗಾಲಯವು ತೋರಿಸಿದ ದೋಷವನ್ನು ಪ್ರಶ್ನಿತ ಸರಕುಗಳಿಂದ ತೆಗೆದುಹಾಕುವುದು;

(ಬಿ) ಯಾವುದೇ ದೋಷವನ್ನು ಮುಕ್ತವಾಗಿರುವಂಥ ಅಮತದೇ ವಿವರಣೆಯ ಹೊಸ ಸರಕುಗಳನ್ನು ಆ ಸರಕುಗಳಿಗೆ ಬದಲಾಗಿ ಇಡುವುದು;

(ಸಿ) ಫಿರ್ಯಾದಿಗೆ ಬೆಲೆ ಅಥವಾ ಸಂದರ್ಭಾನುಸಾರ ಫಿರ್ಯಾದಿಯು ಸಂದಾಯ ಮಾಡಿದ ಖರ್ಚುಗಳನ್ನು ಹಿಂದಿರುಗಿಸುವುದು;

(ಡ) ಎದುರು ಪಕ್ಷಕಾರನ ನಿರ್ಲಕ್ಷ್ಯದಿಂದಾಗಿ ಬಳಕೆದಾರನು ಅನುಭವಿಸಿದ ಯಾವುದೇ ನಷ್ಟ ಅಥವಾ ಹಾನಿಗಾಗಿ ಬಳಕೆದಾರನಿಗೆ ನಷ್ಟ ಪರಿಹಾರವಾಗಿ ಕೊಡಬಹುದಾದಂಥ ಮೊಬಲಗನ್ನು ಸಂದಾಯ ಮಾಡುವುದು.

(2) ಜಿಲ್ಲಾ ನ್ಯಾಯಾಧಿಕರಣದ ಅಧ್ಯಕ್ಷನು ಕನಿಷ್ಟ ಪಕ್ಷ ಆದರೆ ಒಬ್ಬ ಸದಸ್ಯನ ಜೊತೆ ಉಪವೇಶನದಲ್ಲಿದ್ದು, (1) ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ವ್ಯವಹರಣೆಯನ್ನು ನಡೆಸತಕ್ಕದು:

ಪರಂತು, ಆ ಸದಸ್ಯನಿಗೆ ಯಾವುದೇ ಕಾರಣಕ್ಕಾಗಿ ವ್ಯವಹರಣೆಯನ್ನು ಪೂರ್ಣವಾಗುವವರೆಗೆ ಅದನ್ನು ನಡೆಸಲು ಸಾಧ್ಯವಾಗದಿದ್ದರೆ, ಅಧ್ಯಕ್ಷ ಮತ್ತು ಇನ್ನೊಬ್ಬ ಸದಸ್ಯನು ಅಂಥ ವ್ಯವಹರಣೆಯನ್ನು ಹೊಸಗಾಗಿ ನಡೆಸತಕ್ಕದು.

(2ಕ) (1) ನೇ ಉಪಪ್ರಕರಣದ ಮೇರೆಗೆ ಜಿಲ್ಲಾ ನ್ಯಾಯಾಧಿಕರಣವು ಮಾಡಿದ ಪ್ರತಿಯೊಂದು ಆದೇಶಕ್ಕೆ ಅದರ ಅಧ್ಯಕ್ಷ ಮತ್ತು ಆ ವ್ಯವರಣೆಯನ್ನು ನಡೆಸಿದ ಸದಸ್ಯ ಅಥವಾ ಸದಸ್ಯರ ರುಜುಮಾಡತಕ್ಕದ್ದು:

ಪರಂತು, ಅಧ್ಯಕ್ಷನು ಮತ್ತು ಒಬ್ಬ ಸದಸ್ಯನು ವ್ಯವಹರಣೆಯನ್ನು ನಡೆಸಿದ್ದು ಯಾವುದೇ ವಿಷಯ ಅಥವಾ ವಿಷಯಗಳ ಬಗ್ಗೆ ಅವರಲ್ಲಿ ಭಿನ್ನಾಭಿಪ್ರಾಯಗಳಿವೆಯೋ ಆ ವಿಷಯಗಳನ್ನು ತಿಳಿಸತಕ್ಕದು ಮತ್ತು ಅದನ್ನು ಅಂಥ ವಿಷಯ ಅಥವಾ ವಿಷಯಗಳನ್ನು ಸುನಾವಣೆಗಾಗಿ ಇನ್ನೋಬ್ಬ ಸದಸ್ಯನಿಗೆ ಉಲ್ಲೇಖಿಸತಕ್ಕದು ಮತ್ತು ಬಹುಮತದ ಅಭಿಪ್ರಾಯವು ಜಿಲ್ಲಾ ನ್ಯಾಯಾಧಿಕರಣದ ಆದೇಶವಾಗತಕ್ಕುದು.

(3) ಹಿಂದೆ ಹೇಳಿದ ಉಪಬಂಧಗಳಿಗೆ ಒಳಪಟ್ಟು ಜಿಲ್ಲಾ ನ್ಯಾಯಾದಿಕರಣದ ಸದಸ್ಯರ ವರ್ತನೆ, ಅದರ ಉಪವೇಶನಗಳು ಮತ್ತು ಇತರ ವಿಷಯಗಳಿಗೆ ಸಂಬಂಧಪಟ್ಟ ಪ್ರಕ್ರಿಯೆಯು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥದು ಆಗಿರತಕ್ಕದು.

**15. ಅಪೀಲು.–** ಜಿಲ್ಲಾ ನಾಯಾದಿಕರಣವು ಮಾಡಿದ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಆ ಆದೇಶದ ದಿನಾಂಕದಿಂದ 30 ದಿವಸಗಳ ಅವಧಿಯೊಳಗೆ ನಿಯಮಿಸಬಹುದಾದಂಥ ನಮೂನೆ ಮತ್ತು ರೀತಿಯಲ್ಲಿ ಅಂಥ ಆದೇಶದ ವಿರುದ್ಧ ರಾಜ್ಯ ಆಯೋಗಕ್ಕೆ ಅಪೀಲನ್ನು ಸಲ್ಲಿಸಬಹುದು:

**16. ರಾಜ್ಯ ಆಯೋಗದ ರಚನೆ.**–(1) ಪ್ರತಿಯೊಂದು ರಾಜ್ಯ ಆಯೋಗವು,–

(ಎ) **ಅದಕ್ಕೆ ಅಧ್ಯಕ್ಷನಾಗಿರತಕ್ಕ,** ರಾಜ ಸರ್ಕಾರವು ನೇಮಕ ಮಾಡಿದ ಉಚ್ಚ ನ್ಯಾಯಾಲಯದ ನ್ಯಾಯಧೀಶನಾಗಿರುವ ಅಥವಾ ನ್ಯಾಯಾಧೀಶನಾಗಿದ್ದ ಒಬ್ಬ ವ್ಯಕ್ತಿ;

(ಬಿ) ಸಾಮರ್ಥ್ಯ, ನೀತಿ ನಿಷ್ಠೆ ಮತ್ತು ಸ್ಥಾನವನ್ನು ಹೊಂದಿರುವ ವ್ಯಕ್ತಿಗಳಾದ ಮತ್ತು ಅರ್ಥಶಾಸ್ತ್ರ, ಕಾನೂನು, ವಾಣಿಜ್ಯ, ಲೆಕ್ಕಶಾಸ್ತ್ರ, ಉದ್ಯಮ, ಸಾರ್ವಜನಿಕ ವ್ಯವಹರಗಳ ಅಥವಾ ಆಡಳಿತದ ಬಗ್ಗೆ ಸಾಕಷ್ಟು ತಿಳಿವಳಿಕೆ ಅಥವಾ ಅನುಭವವನ್ನು ಹೊಂದಿರುವ ಅಥವಾ ಅವುಗಳಿಗೆ ಸಂಬಂಧಪಟ್ಟ ಸಮಸ್ಯೆಗಳೊಡನೆ ವ್ಯವಹರಿಸಲು ಸಾಮರ್ಥ್ಯವನ್ನು ತೋರಿಸಿರುವಂಥ ಇಬ್ಬರು ಇತರ ಸದಸ್ಯರು, ಅವರ ಪೈಕಿ ಒಬ್ಬಳು ಮಹಿಳೆಯಾಗಿರತಕ್ಕದು.

ಪರಂತು, ಉಚ್ಚ ನ್ಯಾಯಲಯದ ಯಾವನೇ ಹಾಲಿ ನ್ಯಾಯಾಧೀಶನನ್ನು ಆ ಉಚ್ಚ ನ್ಯಾಯಲಯದ ಮುಖ್ಯ ನ್ಯಾಯಧೀಶನೊಂದಿಗೆ ಸಮಾಲೋಚಿಸಿದ ತರುವಾಯ ಹೊರತು ಈ ಉಪಕ್ರಕರಣದ ಮೇರೆಗೆ ನೇಮಕ ಮಾಡತಕ್ಕದಲ್ಲ.

(2) ರಾಜ್ಯ ಆಯೋಗದ ಸದಸ್ಯರಿಗೆ ಸಂದಾಯ ಮಾಡಬೇಕಾದ ಸಂಬಳ ಅಥವಾ ಗೌರವಧನ ಮತ್ತು ಇತರ ಭತ್ಯೆಗಳು ಮತ್ತು ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು (ಪದಾವಧಿಯನ್ನು ಒಳಗೊಂಡು) ರಾಜ್ಯ ಸರ್ಕಾರವು ನಿಯಮಿಸಬಹುದಾದಂಥವು ಆಗಿರತಕ್ಕದು.

**17. ರಾಜ್ಯ ಆಯೋಗದ ಅಧಿಕಾರ ವ್ಯಾಪ್ತಿ.**– ಈ ಅಧಿನಿಯಮದ ಇತರ ಉಪಬಂಧಗಳಿಗೊಳಪಟ್ಟು ರಾಜ್ಯ ಆಯೋಗವು,–

(ಎ) (i)ಕ್ಲೇಮು ಮಾಡಿದ ಸರಕುಗಳ ಅಥವಾ ಸೇವೆಗಳ ಮತ್ತು ನಷ್ಟ ಪರಿಹಾರ ಯಾವುದಾದರೂ ಇದ್ದರೆ ಅದರ ಮೌಲ್ಯವು ಒಂದು ಲಕ್ಷ ರೂಪಾಯಿಗಳನ್ನು ಮೀರಿದಲ್ಲಿ ಆದರೆ 10 ಲಕ್ಷ ರೂಪಾಯಿಗಳನ್ನು ಮೀರದೆ ಇರುವಲ್ಲಿ ಫಿರ್ಯಾದುಗಳು; ಮತ್ತು

(ii) ರಾಜ್ಯದೊಳಗಿನ ಯಾವುದೇ ಜಿಲ್ಲಾ ನ್ಯಾಯಾಧಿಕರಣದ ಆದೇಶಗಳ ವಿರುದ್ಧ ಆಪೀಲುಗಳನ್ನು ಪುರಸ್ಕರಿಸಲು ಮತ್ತು

(ಬಿ) ಆ ಜಿಲ್ಲಾ ನ್ಯಾಯಾಧಿಕರಣವು ಕಾನೂನಿನ ಮೂಲಕ ಅದರಲ್ಲಿ ನಿಹಿತವಾಗಿಲ್ಲದ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿದರೆ ಎಂದು ಅಥವಾ ಹಾಗೆ ನಿಹಿತವಾದ ಅಧಿಕಾರ ವ್ಯಾಪಿಯನ್ನು

ಚಲಾಯಿಸಲು ತಪ್ಪಿದೆ ಎಂದು ಅಥವಾ ಅದರ ಅಧಿಕಾರ ವ್ಯಾಪ್ತಿಯನ್ನು ಚಲಾಯಸುವಲ್ಲಿ ಕಾನೂನು ಬಾಹಿರವಾಗಿ ಮುಖ್ಯ ಕ್ರಮದೋಷದಿಂದ ಕಾರ್ಯನಿರ್ವಹಿಸದೆ ಎಂದು ರಾಜ್ಯ ಆಯೋಗಕ್ಕೆ ಕಂಡುಬರುವಲ್ಲಿ, ರಾಜ್ಯದೊಳಗಿನ ಯಾವುದೇ ಅಂಥ ಜಿಲ್ಲಾ ನ್ಯಾಯಾಧಿಕರಣದ ಮುಂದೆ ಇತ್ಯರ್ಥದಲ್ಲಿರುವ ಅಥವಾ ತೀಮಾನಿಸಲಾಗಿರುವ ಯಾವುದೇ ಬಳಕರದಾರನ ವಿವಾದದಲ್ಲಿನ ದಾಖಲೆಗಳನ್ನು ತರಿಸಿಕೊಳ್ಳಲು ಮತ್ತು ಯುಕ್ತ ಆದೇಶಗಳನ್ನು ಮಾಡಲು

– ಅಧಿಕಾರ ವ್ಯಾಪ್ತಿಯನ್ನು ಹೊಮದಿರತಕ್ಕದು.

**18. ರಾಜ್ಯ ಆಯೋಗಗಳಿಗೆ ಅನ್ವಯವಾಗಬಹುದಾದ ಪ್ರಕ್ರಿಯೆ.**–ಜಿಲ್ಲಾ ನ್ಯಾಯಾಧಿಕರಣಗಳಿಂದ ಫಿರ್ಯಾದುಗಳ ವಿಲೆಗಾಗಿ 12,13 ಮತ್ತು 14 ನೇ ಪ್ರಕರಣಗಳಲ್ಲಿ ಮತ್ತು ಅವುಗಳ ಮೇರೆಗೆ ರಚಿಸಿದ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯು ಅವಶ್ಯವಿರಬಹುದಾದಂಥ ಮಾರ್ಪಾಟುಗಳೊಂದಿಗೆ ರಾಜ್ಯ ಆಯೋಗದಿಂದ ವಿವಾದಗಳ ವಿಲೆಗೆ ಅನ್ವಯವಾಗತಕ್ಕದು.

**18ಕ. ಅಧ್ಯಕ್ಷನ ಪದವು ತೆರವಾಗುವುದು.**– ಸಂದರ್ಭಾನುಸಾರ ಜಿಲ್ಲಾ ನ್ಯಾಯಾಧಿಕರಣ ಅಥವಾ ರಾಜ್ಯ ಆಯೋಗದ ಅಧ್ಯಕ್ಷನ ಪದವು ತರವಾದಾಗ ಅಥವಾ ಅಂಥ ಯಾವನೇ ಅಧ್ಯಕ್ಷನು, ಗೈರುಹಾಜರಿಯ ಕಾರಣದಿಂದಾಗಿ ಅಥವಾ ಅನ್ಯಥಾ ಅವನ ಪದದ ಕರ್ತವ್ಯಗಳನ್ನು ನಿರ್ವಹಿಸಲು ಅಸರ್ಥನಾದಾಗ ಆ ಪದದ ಕರ್ತವ್ಯಗಳನ್ನು ಆ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದಂತೆ ಜಿಲ್ಲಾ ನ್ಯಾಯಾಧಿಕರಣ ಅಥವಾ ಸಂದರ್ಭಾನುಸಾರ ರಾಜ್ಯ ಆಯೋಗದ ಅಧ್ಯಕ್ಷನಾಗಿ ನೇಮಕಗೊಳ್ಳಲು ಅರ್ಹನಾಗಿರುವಂಥ ವ್ಯಕ್ತಿಯು ನಿರ್ವಹಿಸತಕ್ಕುದು.

**19. ಅಫೀಲುಗಳು.**–17 ನೇ ಪ್ರಕರಣದ (ಕ) ಖಂಡದ (1) ನೇ ಉಪ–ಖಂಡದ ಮೂಲಕ ಪ್ರದಾನ ಮಾಡಿದ ಅದರ ಅಧಿಕಾರಗಳನ್ನು ಚಲಾಯಿಸಿ ರಾಜ್ಯ ಆಯೋಗವು ಮಾಡಿದ ಅದೇ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಆ ಆದೇಶದ ದಿನಾಂಕದಿಂದ ಮೂವತ್ತು ದಿವಸಗಳ ಅವಧಿಯೊಳಗೆ ರಾಷ್ಟ್ರೀಯ ಆಯೋಗಕ್ಕೆ ಅಂಥ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಬಹುದು:

ಪರಂತು, ರಾಷ್ಟ್ರೀಯ ಆಯೋಗವು ಸದರಿ ಮೂವತ್ತು ದಿವಸಗಳ ಅವಧಿಯು ಮುಕ್ತಾಯವಾದ ತರುವಾಯ ಅವಧಿಯೊಳಗೆ ಅದನ್ನು ದಾಖಲುಮಾಡದೆ ಇರುವುದಕ್ಕಾಗಿ ಸಾಕಷ್ಟು ಕಾರಣವಿತ್ತೆಂದು ಅದಕ್ಕೆ ಮನದಟ್ಟಾದರೆ ಅಪೀಲನ್ನು ಪುರಸ್ಕರಿಸಬಹುದು.

**20. ರಾಷ್ಟ್ರೀಯ ಆಯೋಗದ ರಚನೆ.–** (1) ರಾಷ್ಟ್ರೀಯ ಆಯೋಗವು,–

(ಎ) ಅದರ ಅಧ್ಯಕ್ಷನಾಗಿರತಕ್ಕ, ಕೇಂದ್ರ ಸರ್ಕಾರವು ನೇಮಕ ಮಾಡಬೇಕಾದ ಸರ್ವೋಚ್ಚನ್ಯಾಯಲಯ ನ್ಯಾಯಧೀಶನಾಗಿರುವ ಅಥವಾ ನ್ಯಾಯಧೀಶನಾಗಿದ್ದಂಥ ವ್ಯಕ್ತಿ;

(ಬಿ) ಸಾಮರ್ಥ್ಯ, ನೀತಿ ನಿಷ್ಠೆ ಮತ್ತು ಸ್ಥಾನವನ್ನು ಹೊಂದಿರುವ ವ್ಯಕ್ತಿಗಳಾದ ಮತ್ತು ಅರ್ಥಶಾಸ್ತ್ರ ಕಾನೂನು, ವಾಣಿಜ್ಯ, ಲೆಕ್ಕಶಾಸ್ತ್ರ, ಉದ್ಯಮ, ಸಾರ್ವಜನಿಕ ವ್ಯವಹರಗಳ ಅಥವಾ ಆಡಳಿತಗಳ ಬಗ್ಗೆ ಸಾಕಷ್ಟು ತಿಳಿವಳಿಕೆ ಅಥವಾ ಅನುಭವವನ್ನು ಹೊಮದಿರುವ ಅಥವಾ ಅವುಗಳಿಗೆ ಸಂಬಂಧಪಟ್ಟ ಸಮಸ್ಯೆಗಳೊಡನೆ ವ್ಯವಹರಿಸಲು ಸಾಮರ್ಥ್ಯವನ್ನು ತೋರಿಸಿರುವ ನಾಲ್ವರು ಇತರ ಸದಸ್ಯರು, ಅವರ ಪೈಕಿ ಒಬ್ಬಳು ಮಹಿಳೆಯಾಗಿರತಕ್ಕದು

–ಇವರನ್ನು ಒಳಗೊಂಡಿರತಕ್ಕದು:

ಪರಂತು, ಸರ್ವೋಚ್ಚ ನ್ಯಾಯಾಲಯದ ಯಾವನೇ ಹಾಲಿ ನ್ಯಾಯಾಧೀಶರನ್ನು ಆ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನೊಂದಿಗೆ ಸಮಾಲೋಚಿಸಿದ ತರುವಾಯ ಹೊರತು ಈ ಉಪಪ್ರಕರಣದ ಮೇರೆಗೆ ಮಾಡತಕ್ಕದಲ್ಲ,

(2) ರಾಷ್ಟ್ರೀಯ ಆಯೋಗದ ಸದಸ್ಯರಿಗೆ ಸಂದಾಯ ಮಾಡಬೇಕಾದ ಸಂಬಳ ಅಥವಾ ಗೌರವಧನ ಮತ್ತು ಇತರ ಭತ್ಯೆಗಳು ಮತ್ತು ಸೇವೆಯ ಇತರ ಷರತ್ತುಗಳು ಮತ್ತು ನಿಬಂಧನೆಗಳು (ಪದಾವಧಿಯನ್ನು ಒಳಗೊಂಡು) ನಿಯಮಿಸಬಹುದಾದಂಥವುಗಳು ಆಗಿರತಕ್ಕುದು:

21. **ರಾಷ್ಟ್ರೀಯ ಆಯೋಗದ ಅಧಿಕಾರ ವ್ಯಾಪ್ತಿ.–** ಈ ನಿಯಮದ ಇತರ ಉಪಬಂಧಗಳಿಗೊಳಪಟ್ಟು ರಾಷ್ಟ್ರೀಯ ಆಯೋಗವು,–

(ಎ) (i) ಕ್ಲೇಮು ಮಾಡಿದ ಸರಕುಗಳ ಅಥವಾ ಸೇವೆಗಳ ಮತ್ತು ನಷ್ಟ ಪರಿಹಾರ ಯಾವುದಾದರೂ ಇದ್ದರೆ, ಅದರ ಮೌಲ್ಯವು 10 ಲಕ್ಷ ರೂಪಾಯಿಗಳನ್ನು ಮೀರುವಲ್ಲಿ ಫಿರ್ಯಾದುಗಳನ್ನು; ಮತ್ತು

(ii) ಯಾವುದೇ ರಾಜ್ಯ ಆಯೋಗವು, ಕಾನೂನಿನ ಮೂಲಕ ಅದರಲ್ಲಿ ನಿಹಿತವಾಗಿಲ್ಲದ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸದೆ ಎಂದು ಅಥವಾ ಹಾಗೆ ನಿಹಿತವಾದ ಅಧಿಕಾರ ವ್ಯಾಪ್ತಿಯನ್ನು

ಚಲಾಯಿಸಲು ತಪ್ಪಿದೆ ಎಂದು ಅಥವಾ ಅದರ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವಲ್ಲಿ ಕಾನೂನು ಬಾಹಿರವಾಗಿ ಅಥವಾ ಮುಖ್ಯ ಕ್ರಮದೋಷದಿಂದ ಕಾರ್ಯ ನಿರ್ವಹಿಸಿದೆ ಎಂದು ರಾಚ್ಟ್ರೀಯ ಆಯೋಗಕ್ಕೆ ಕಂಡುಬರುವಲ್ಲಿ, ಅಮತ ಯಾವುದೇ ರಾಜ್ಯ ಆಯೋಗದ ಕಾರ್ಯದಲ್ಲಿರುವ ಅಥವ ತೀಮಾನಿಸಲಾಗಿರುವ ಯವುದೇ ಬಳಕೆದಾರ ವಿವಾದದಲ್ಲಿನ ದಾಖಲೆಗಳನ್ನು ತರಿಸಿಕೊಳ್ಳಲು ಮತ್ತು ಯುಕ್ತ ಆದೇಶಗಳನ್ನು ಮಾಡಲು

– ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದು.

**22. ರಾಷ್ಟ್ರೀಯ ಆಯೋಗಕ್ಕೆ ಅನ್ವಯವಾಗಬಹುದಾದ ಪ್ರಕ್ರಿಯೆ:–**ರಾಷ್ಟ್ರೀಯ ಆಯೋಗವು ಅದರ ಮುಂದಿರುವ ಯಾವುದೇ ಫಿರ್ಯಾದು ಅಥವಾ ಯಾವುದೇ ವ್ಯವಹರಣೆಯನ್ನು ವಿಲೆ ಮಾಡುವಲ್ಲಿ 13 ನೇ ಪ್ರಕರಣದ (4) ಮತ್ತು (5) ನೇ ಉಪಪ್ರಕರಣದಲ್ಲಿ ನಿರ್ದಿಷ್ಟ ಪಡಿಸಿದಂತೆ ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಕೇಂದ್ರ ಸರ್ಕಾರವು ನಿಯಮಿಸಬಹುದಾದಂತೆ ಪ್ರಕ್ರಿಯೆಯನ್ನು ಅನುಸರಿಸತಕ್ಕದು.

**23. ಅಪೀಲು.–**21 ನೇ ಪ್ರಕರಣದ (ಕ) ಖಂಡದ (1) ನೇ ಉಪಖಂಡದ ಮೂಲಕ ಪ್ರದಾನ ಮಾಡಿದ ಅದರ ಅಧಿಕಾರಿಗಳನ್ನು ಚಲಾಯಿಸಿ ರಾಷ್ಟೀಯ ಆಯೋಗವು ಮಾಡಿದ ಆದೇಶದಿಂದ ಬಾಧಿತನಾದ ಯಾವುದೇ ವ್ಯಕ್ತಿಯು ಅಂಥ ಆದೇಶದ ವಿರುದ್ಧ ಆದೇಶದ ದಿನಾಂಕದಿಂದ 30 ದಿವಸಗಳ ಅವಧಿಯೊಳಗೆ ಸರ್ವೋಚ್ಛ ನ್ಯಾಯಾಲಯಕ್ಕೆ ಅಫೀಲನ್ನು ಸಲ್ಲಿಸಬಹುದು:

ಪರಂತು, ಸರ್ವೋಚ್ಛ ನ್ಯಾಯಲಯವು ಸದರಿ ಮೂವತ್ತು ದಿವಸಗಳ ಅವಧಿಯು ಮುಕ್ತಾಯವಾದ ತರುವಾಯ ಆ ಅವಧಿಯೊಲಗೆ ಅದನ್ನು ದಾಖಲು ಮಾಡದೇ ಇರುವುದಕ್ಕಾಗಿ ಕಾರಣವಿತ್ತೆಂದು ಅದಕ್ಕೆ ಮನದಟ್ಟಾದರೆ ಅಪೀಲನ್ನು ಪುರಸ್ಕರಿಸಬಹುದು.

**24. ಆದೇಶಗಳ ಅಂತಿಮತೆ:–** ಜಿಲ್ಲಾ ನ್ಯಾಯಧಿಕರಣ, ರಾಜ್ಯ ಆಯೋಗ ಅಥವಾ ರಾಷ್ಟ್ರೀಯ ಆಯೋಗದ ಪ್ರತಿಯೊಂದು ಆದೇಶವು, ಅಂಥ ಆದೇಶದ ವಿರುದ್ಧ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಯಾವುದೇ ಅಫೀಲನ್ನು ಸಲ್ಲಿಸದಿದ್ದರೆ ಅಂತಿಮವಾಗಿರತಕ್ಕದು.

**25. ನ್ಯಾಯಾಧೀಕರಣ, ರಾಜ್ಯ ಆಯೋಗ ಅಥವಾ ರಾಷ್ಟ್ರೀಯ ಆಯೋಗದ ಆದೇಶಗಳ ಜಾರಿ.–** ಜಿಲ್ಲಾ ನ್ಯಾಯಾಧಿಕರಣ, ರಾಜ್ಯ ಆಯೋಗ ಅಥವಾ ರಾಷ್ಟ್ರೀಯ ಆಯೋಗವು ಮಾಡಿದ

ಪ್ರತಿಯೊಂದು ಅದೇಶವನ್ನು ಸಂದರ್ಭಾನುಸಾರ ಜಿಲ್ಲಾ ನ್ಯಾಯಧಿಕರಣ, ರಾಜ್ಯ ಆಯೋಗ ಅಥವಾ ಆದೇಶವಾಗಿದ್ದಿದ್ದರೆ ಹೇಗೋ ಹಾಗೆ ಅದೇ ರೀತಿಯಲ್ಲಿ ಜಾರಿಗೊಳಿಸಬಹುದು ಮತ್ತು ಅದನ್ನು ಜಾರಿಗೊಳಿಸಲು ಅದು ಅಸಮರ್ಥವಾದ ಸಂದರ್ಭದಲ್ಲಿ ಅಂಥ ಆದೇಶವನ್ನು ಯಾವ ನ್ಯಾಯಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳಲ್ಲಿ,–

(ಎ) ಕಂಪನಿಯ ವಿರುದ್ಧವಾದ ಆದೇಶದ ಸಂದರ್ಭದಲ್ಲಿ, ಕಂಪನಿಯ ನೋಂದಾಯಿತ ಕಚೇರಿಯು ಇರುವುದೋ, ಅಥವಾ

(ಬಿ) ಯಾವನೇ ಇತರ ವ್ಯಕ್ತಿಯ ವಿರುದ್ಧವಾದ ಆದೇಶದ ಸಂದರ್ಭದಲ್ಲಿ, ಸಂಬಂಧಿಸಿದ ವ್ಯಕ್ತಿಯು ಸ್ವ ಇಚ್ಛೆಯಿಂದ ವಾಸಿಸುವ ಅಥವಾ ವ್ಯವಹಾರವನ್ನು ನಡೆಸುತ್ತಿರುವ ಅಥವಾ ಲಾಭಕ್ಕಾಗಿ ಖುದ್ದಾಗಿ ದುಡಿಯುತ್ತಿರುವ ಸ್ಥಳವು ಇರುತ್ತದೋ;

– ಆ ಯಾವುದೇ ನ್ಯಾಯಾಲಯಕ್ಕೆ ಕಳುಹಿಸುವುದು ಜಿಲ್ಲಾ ನ್ಯಾಯಾಧಿಕರಣ, ರಾಜ್ಯ ಆಯೋಗ ಅಥವಾ ರಾಷ್ಟ್ರೀಯ ಆಯೋಗಕ್ಕೆ ಸಮ್ಮತವಾಗಿರತಕ್ಕದ್ದು.
ಮತ್ತು ಆ ತರುವಾಯ ಯಾವ ನ್ಯಾಯಾಲಯಕ್ಕೆ ಆ ಆದೇಶವನ್ನು ಹಾಗೆ ಕಳುಹಿಸಲಾಗಿದೆಯೋ ಆ ನ್ಯಾಯಾಲಯವು, ಅಮಲ್ ಜಾರಿಗಾಗಿ ಅದಕ್ಕೆ ಕಳುಹಿಸಿದ ಡಿಕ್ರಿ ಅಥವಾ ಆದೇಶವು ಆಗಿದ್ದಿದ್ದರೆ ಹೇಗೋ ಹಾಗೆ ಆ ಆದೇಶವನ್ನು ಅಮಲ್ ಜಾರಿಗೊಳಿಸತಕ್ಕದ್ದು.

**26. ಕ್ಷುಲ್ಲಕ ಅಥವಾ ಕಿರುಕುಳಕಾರಿ ಫಿರ್ಯಾದು ವಜಾ.–** ಹೂಡಲಾದ ಫಿರ್ಯಾದು ಕ್ಷುಲ್ಲಕ ಅಥವಾ ಕಿರುಕುಳಕಾರಿ ಎಂದು ಕಂಡುಬಂದರೆ, ಜಿಲ್ಲಾ ನ್ಯಾಯಾಧಿಕರಣ, ರಾಜ್ಯ ಆಯೋಗ ಅಥವಾ ಸಂದರ್ಭಾನುಸಾರ ರಾಷ್ಟ್ರೀಯ ಆಯೋಗವು ಫಿರ್ಯಾದನ್ನು ವಜಾ ಮಾಡಬಹುದು.

**27. ದಂಡನೆಗಳು.–** ಯಾರ ವಿರುದ್ಧ ಫಿರ್ಯಾದನ್ನು ಮಾಡಲಾಗಿದೆಯೋ ಆ ವ್ಯಾಪಾರಿ ಅಥವಾ ವ್ಯಕ್ತಿಯು ಸಂದರ್ಭಾನುಸಾರ ಜಿಲ್ಲಾ ನ್ಯಾಯಾಧಿಕರಣ, ರಾಜ್ಯ ಆಯೋಗ ಅಥವಾ ರಾಷ್ಟ್ರೀಯ ಆಯೋಗವು ಮಾಡಿದ ಯಾವುದೇ ಆದೇಶವನ್ನು ಪಾಲಿಸಲು ತಪ್ಪಿದ್ದಲ್ಲಿ ಅಥವಾ ಲೋಪಿಸಿದಲ್ಲಿ, ಅಂಥ ವ್ಯಾಪಾರಿ ಅಥವಾ ವ್ಯಕ್ತಿಯು, ಒಂದು ತಿಂಗಳಿಗಿಂತ ಕಡಿಮೆ ಇಲ್ಲದಂಥ ಆದರೆ ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳಿಗೆ ಕಡಿಮೆ ಇಲ್ಲದಂಥ ಆದರೆ ಹತ್ತು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

ಪರಂತು, ಸಂದರ್ಭಾನುಸಾರ ಜಿಲ್ಲಾ ನ್ಯಾಯಾಧಿಕರಣ, ರಾಜ್ಯ ಆಯೋಗ ಮತ್ತು ರಾಷ್ಟ್ರೀಯ ಆಯೋಗವು ಯಾವುದೇ ಪ್ರಕರಣದ ಸಂದರ್ಭಗಳು ಹಾಗೆ ಅಗತ್ಯಪಡಿಸುತ್ತದೆಂದು ಅದಕ್ಕೆ ಮನದಟ್ಟಾದರೆ, ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅವಧಿಗಿಂತ ಕಡಿಮೆ ಅವಧಿಯ ಕಾರವಾಸದ ಮತ್ತು ಕನಿಷ್ಠ ಮೊಬಲಗಿಗಿಂತ ಕಡಿಮೆ ಮೊಬಲಗಿನ ಶಿಕ್ಷೆ ಅಥವಾ ಅವೆರಡನ್ನೂ ವಿಧಿಸಬಹುದು.

## ಅಧ್ಯಾಯ –IV

### ಸಂಕೀರ್ಣ

28. **ಸದ್ಭಾವನೆಯಿಂದ ಕೈಕೊಂಡ ಕಾರ್ಯದ ಸಂರಕ್ಷಣೆ.–** ಜಿಲ್ಲಾ ನ್ಯಾಯಾಧಿಕರಣ ಅಥವಾ ರಾಜ್ಯ ಆಯೋಗ ಅಥವಾ ರಾಷ್ಟ್ರೀಯ ಆಯೋಗದ [ಸದಸ್ಯರು ಅಥವಾ ಜಿಲ್ಲಾ ನ್ಯಾಯಾಧಿಕರಣ, ರಾಜ್ಯ ಆಯೋಗ ಅಥವಾ ರಾಷ್ಟ್ರೀಯ ಆಯೋಗದ] ನಿರ್ದೇಶನದ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ ಯಾವನೇ ಅಧಿಕಾರಿ ಅಥವಾ ವ್ಯಕ್ತಿಯ ವಿರುದ್ಧ ಅದು ಮಾಡಿದ ಯಾವುದೇ ಆದೇಶವನ್ನು ಅಮಲ್ ಜಾರಿಗೊಳಿಸುವುದಕ್ಕಾಗಿ ಅಥವಾ ಈ ಅಧಿನಿಯಮ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ನಿಯಮ ಅಥವಾ ಆದೇಶದ ಮೇರೆಗೆ ಅಂಥ ಸದಸ್ಯ, ಅಧಿಕಾರಿ ಅಥವಾ ವ್ಯಕ್ತಿಯು ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದಂಥ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

29. **ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಆದೇಶದ ಮೂಲಕ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅವಶ್ಯ ಅಥವಾ ವಿಹಿತವೆಂದು ಅದಕ್ಕೆ ಕಂಡು ಬರುವ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದಂಥ ಉಪಬಂಧಗಳನ್ನು ಮಾಡಬಹುದು:

ಪರಂತು, ಅಂಥ ಯಾವುದೇ ಆದೇಶವನ್ನು ಈ ಅಧಿನಿಯಮದ ಪ್ರಾರಂಭದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

29ಕ. **ಖಾಲಿ ಸ್ಥಾನಗಳು ಅಥವಾ ನೇಮಕಾತಿಯಲ್ಲಿನ ದೋಷಗಳು ಆದೇಶಗಳನ್ನು ಅಸಿಂಧುಗೊಳಿಸದಿರುವುದು.–** ಜಿಲ್ಲಾ ನ್ಯಾಯಾಧಿಕರಣ, ರಾಜ್ಯ ಆಯೋಗ ಅಥವಾ ರಾಷ್ಟ್ರೀಯ

ಆಯೋಗದ ಯಾವುದೇ ಕಾರ್ಯ ಅಥವಾ ವ್ಯವಹರಣೆಯು, ಅದರ ಸದಸ್ಯರ ಯಾವುವೇ ಸ್ಥಾನಗಳು ಖಾಲಿ ಇವೆಯೆಂಬ ಅಥವಾ ಅದರ ರಚನೆಯಲ್ಲಿ ಯಾವುದೇ ದೋಷವಿದೆಯೆಂಬ ಕಾರಣಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

**30. ನಿಯಮಗಳ ರಚನಾಧಿಕಾರ.–** (1) ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ 4ನೇ ಪ್ರಕರಣದ (2)ನೇ ಉಪ–ಪ್ರಕರಣದ (ಬಿ)ಖಂಡದಲ್ಲಿ 5ನೇ ಪ್ರಕರಣದ (2)ನೇ ಉಪ–ಪ್ರಕರಣ, 13ನೇ ಪ್ರಕರಣದ (4)ನೇ ಉಪ–ಪ್ರಕರಣದ ()ನೇ ಖಂಡ 19ನೇ ಪ್ರಕರಣ, 20ನೇ ಪ್ರಕರಣದ (2)ನೇ ಉಪ–ಪ್ರಕರಣ ಮತ್ತು 22ನೇ ಪ್ರಕರಣದಲ್ಲಿ ಒಳಗೊಂಡಿರುವ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ 10ನೇ ಪ್ರಕರಣದ (3)ನೇ ಉಪ–ಪ್ರಕರಣ, [13ನೇ ಪ್ರಕರಣದ (1)ನೇ ಉಪ–ಪ್ರಕರಣದ (ಗ) ಖಂಡ, 14ನೇ ಪ್ರಕರಣದ (3)ನೇ ಉಪ–ಪ್ರಕರಣ] 15ನೇ ಪ್ರಕರಣ ಮತ್ತು 16ನೇ ಪ್ರಕರಣದ (2)ನೇ ಉಪ–ಪ್ರಕರಣದಲ್ಲಿ ಒಳಗೊಂಡಿರುವ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

**31. ನಿಯಮಗಳನ್ನು ಇಡುವುದು.–** (1)ಕೇಂದ್ರ ಸರ್ಕಾರವು ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(2) ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗ ರಾಜ್ಯ ವಿಧಾನ ಮಂಡಲದ ಮುಂದೆ ಇಡತಕ್ಕದ್ದು.

**ಕೆ.ಎಲ್. ಮೋಹನ್ ಪುರಿಯಾ**